# ಮೌಲ್ಯಾಧಾರಿತ ಶಿಕ್ಷಣ

## ಶಿಕ್ಷಕರ ಕೈಪಿಡಿ

**1 – 3 ನೇ ವರ್ಗ**

## ರಾಷ್ಟ್ರೀಯ ಮೌಲ್ಯಗಳ ಪುನರುತ್ಥಾನ ಪ್ರತಿಷ್ಠಾನ

## (Foundation for Restoration of National Values)

# ಪರಿವಿಡಿ

1. ಮುನ್ನುಡಿ

2. ಅರಿಕೆ

3. ಅಧ್ಯಕ್ಷರಿಂದ ಸಂದೇಶ

4. ಕೈಪಿಡಿ – ಒಂದು ಪರಿಚಯ

4.1 ರಾಷ್ಟ್ರೀಯ ಮೌಲ್ಯಗಳ ಪುನರುತ್ಥಾನ ಪ್ರತಿಷ್ಠಾನ ಮತ್ತು ಮೌಲ್ಯಾಧಾರಿತ ಶಿಕ್ಷಣದ ಬಗ್ಗೆ ಕಿರು ಪರಿಚಯ

4.2 ಮೌಲ್ಯಾಧಾರಿತ ಶಿಕ್ಷಣದಲ್ಲಿ ಸಾಮಾನ್ಯ ಪಠ್ಯಕ್ರಮದ ಅವಶ್ಯಕತೆ

5. ಬೋಧಕರಿಗೆ ಸೂಚನೆಗಳು

6. ರಾಷ್ಟ್ರೀಯ ಶಾಶ್ವತ ಮೌಲ್ಯಗಳು

6.1.1 ರಾಷ್ಟ್ರೀಯ ಧ್ಯೇಯ ವಾಕ್ಯ – 'ಸತ್ಯಮೇವ ಜಯತೆ'

6.1.2 ಪ್ರಾಮಾಣಿಕತೆ ಹಾಗು ಸತ್ಯಸಂಧತೆ

6.1.3 ನ್ಯಾಯ ಮತ್ತು ನಿಷ್ಪಕ್ಷಪಾತ

6.2 ರಾಷ್ಟ್ರಧ್ವಜ – ಸಂಕ್ಷಿಪ್ತ ಪರಿಚಯ

6.2.1 ಸಾಮರ್ಥ್ಯ ಹಾಗು ಆರೋಗ್ಯ – ರಾಷ್ಟ್ರಧ್ವಜದಲ್ಲಿನ ಕೇಸರಿ ವರ್ಣಾಧಾರಿತ

6.2.2 ಸ್ವಚ್ಛತೆ – ರಾಷ್ಟ್ರಧ್ವಜದಲ್ಲಿನ ಶ್ವೇತವರ್ಣಾಧಾರಿತ

6.2.3 ಪರಿಸರದ ಬಗ್ಗೆ ಕಾಳಜಿ – ಹಸಿರು ವರ್ಣಾಧಾರಿತ

6.3 ಅಶೋಕ ಚಕ್ರ

6.3.1 ಸಾಮ್ರಾಟ ಅಶೋಕನ ಕತೆ

6.3.2 ಏಕತೆ

6.3.3 ಹಂಚಿಕೊಳ್ಳುವಿಕೆ

6.3.4 ಸಹನಾಶಕ್ತಿ

6.3.5 ಪ್ರೀತಿ ಮತ್ತು ದಯೆ

6.3.6 ಸಮಯಪ್ರಜ್ಞೆ

6.4 ಅನುಬಂಧಗಳು

6.5 ಶಿಕ್ಷಕರಿಗೆ ಮಾರ್ಗದರ್ಶನ

# ಪ್ರವೇಶಿಕೆ

ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕಪ್ರಾಪ್ತಿ ಹಾಗೂ ದಾಖಲಾತಿಯಲ್ಲಿ ಭಾರತವು ಪ್ರಚಂಡಪ್ರಗತಿಯನ್ನು ಸಾಧಿಸಿದೆ. ಶಿಕ್ಷಣಾವಕಾಶ ಹಾಗೂ ದಾಖಲಾತಿಯ ಹೆಚ್ಚಳವಮಾತ್ರದಿಂದ ಮಕ್ಕಳು ಪಾರಂಪರಿಕ ಹಾಗೂ ರಾಷ್ಟ್ರೀಯವೌಲ್ಯಗಳಲ್ಲಿ ಬೋಧಿತರೆಂದು ನೆಚ್ಚಲಾಗದು. ಮಕ್ಕಳು ವೌಲ್ಯಯುತ ಜೀವನವನ್ನು ನಡೆಸುವಂತಾಗಿ ಅವರನ್ನು ದೇಶದ ಸತ್ಪ್ರಜೆಗಳನ್ನಾಗಿಸುವ ಪ್ರಾಥಮಿಕಕಾರ್ಯದಿಂದ ಶಿಕ್ಷಕರನ್ನು ವಿಮುಖವಾಗಿಸುವುದೆಂದರೆ ಜಾಗತಿಕ ಸ್ಪರ್ಧಾತ್ಮಕತೆಯ ಒತ್ತಡ. ಮಕ್ಕಳಲ್ಲಿ ನೀತಿ – ಧಾರ್ಮಿಕತೆಗಳ ಬಗೆಗೆ ಅರಿವನ್ನು ಮೂಡಿಸಲು ಹೆತ್ತವರಿಗೆ ಸಮಯವಾಗಲಿ ಪ್ರವೃತ್ತಿಯಾಗಲಿ ಇಲ್ಲ. ಪರಿಣಾಮವಾಗಿ, ಶಾಲೆ – ಮಹಾವಿದ್ಯಾಲಯಗಳಿಂದ ಉತ್ತೀರ್ಣರಾಗುವ ವಿದ್ಯಾರ್ಥಿಗಳ ಚಾರಿತ್ರ್ಯ, ನೈತಿಕತೆ ಹಾಗೂ ಸಾಮಾನ್ಯ ನಡತೆಯಲ್ಲಿ ಗಣನೀಯ ಅವನತಿ ಕಂಡುಬಂದಿದೆ.

ವಿವಿಧ ನೀತಿದಾಖಲೆಗಳಲ್ಲಿ ವೌಲ್ಯಾಧಾರಿತ ಶಿಕ್ಷಣಕ್ಕಾಗಿ ಕಾಳಜಿ :

ಸ್ವಾತಂತ್ರ್ಯಾನಂತರದ ಸರಕಾರದ ನೀತಿದಾಖಲೆಗಳಲ್ಲಿ ಇತ್ತೀಚೆಗೆ ವೌಲ್ಯಾಧಾರಿತ ಶಿಕ್ಷಣದ ಬಗ್ಗೆ ಕಾಳಜಿಯು ಬಿಂಬಿತವಾಗಿದೆ. ಶಿಕ್ಷಣದ ಗುರಿಯ ವ್ಯಾಖ್ಯಾನವು ಚಾರಿತ್ರ್ಯನಿರ್ಮಾಣಕ್ಕೆ ಹೆಚ್ಚು ಒತ್ತು ನೀಡಬೇಕೆಂಬುದು ರಾಷ್ಟ್ರೀಯ ಪ್ರೌಢಶಿಕ್ಷಣ ಆಯೋಗದ ಮಹತ್ವದ ಹೆಗ್ಗುರುತಾಗಿದೆ. ವಿಶ್ವವಿದ್ಯಾಲಯ ಶಿಕ್ಷಣ ಆಯೋಗ (1962)ದ ವರದಿಯ ಪ್ರಕಾರ, " ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಾತ್ಮಿಕ ವಿಷಯಗಳನ್ನು ಹೊರಗಿಟ್ಟರೆ, ನಾವು ನಮ್ಮ ಸಂಪೂರ್ಣ ಐತಿಹಾಸಿಕ ಬೆಳವಣಿಗೆಗೆ ವೋಸಮಾಡಿದಂತಾಗುತ್ತದೆ"ಎಂದು ಉಲ್ಲೇಖಿತವಾಗಿದೆ. 1964 - 66 ರ ಶಿಕ್ಷಣ ಆಯೋಗವು "ಶಿಕ್ಷಣ ಹಾಗು ರಾಷ್ಟ್ರೀಯ ಅಭಿವೃದ್ಧಿ"ಯ ಗ್ರಹಿಕೆಯಾಧಾರದನ್ವಯ, ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಸಾಮಾಜಿಕ, ನೈತಿಕ ಹಾಗು ಅಧ್ಯಾತ್ಮಿಕವೌಲ್ಯಗಳ ಅನುಪಸ್ಥಿತಿ ಹಾಗು ಅವುಗಳಿಗೆ ಅವಕಾಶವಿಲ್ಲದಿರುವುದು ಒಂದು ಗಂಭೀರ ದೋಷವಾಗಿ ಗುರುತಿಸಲಾಗಿರುವ ಬಗ್ಗೆ ಬೆಳಕು ಬೀರಿದೆ.

ಸಾಮಾಜಿಕ ಹಾಗು ನೈತಿಕ ವೌಲ್ಯಗಳ ಕೃಷಿಗೆ ಶಿಕ್ಷಣವನ್ನು ಬಲವಾದ ಸಾಧನವಾಗಿ ಪರಿವರ್ತಿಸುವುದಾಗಿ ರಾಷ್ಟ್ರೀಯ ಶಿಕ್ಷಣ ನೀತಿ (1986)ಯು ಪ್ರತಿಪಾದಿಸಿದೆ. ಇದರನ್ವಯ 1992ರಲ್ಲಿ ಕ್ರಿಯಾರೂಪ ಪಡೆದ ಈ ಕಾರ್ಯಕ್ರಮವು, ವೌಲ್ಯಾಧಾರಿತ ಶಿಕ್ಷಣದ ಹಲವು ಘಟಕಗಳನ್ನು ಪ್ರೌಢ ಶಿಕ್ಷಣವೂ ಸೇರಿದಂತೆ ಪ್ರಾಥಮಿಕಶಿಕ್ಷಣದ ಎಲ್ಲಾ ಹಂತಗಳಲ್ಲಿಯೂ ಪಠ್ಯಕ್ರಮದೊಂದಿಗೆ ಸಂಯೋಜಿಸಲು ಪ್ರಯತ್ನ ಪಟ್ಟಿತು.

ಶಿಕ್ಷಣವು ಮಾನವರ ಬಹುಮುಖಿ ಬೆಳವಣಿಗೆಯನ್ನು ಎತ್ತಿ ತೋರಿಸಬೇಕು ಮತ್ತು ಮಾನವೀಯಮೌಲ್ಯಗಳ ಶಿಕ್ಷಣದ ಕಾರ್ಯಕ್ರಮವನ್ನು ಮೂಲ ಸಾರ್ವತ್ರಿಕ ಮಾನವೀಯಮೌಲ್ಯಗಳ ಸುತ್ತ ನಿರ್ಮಿಸಬೇಕೆಂದು ಮೌಲ್ಯಾಧಾರಿತ ಶಿಕ್ಷಣದ ಬಗ್ಗೆ ಭಾರತ ಸರ್ಕಾರದ ವರದಿಯು ( ಚವನ್ ಸಮಿತಿ ವರದಿ, 1999) ಶಿಫಾರಸು ಮಾಡಿದೆ.

ಪಠ್ಯಕ್ರಮದೊಂದಿಗೆ ಮೌಲ್ಯಾಧಾರಿತ ಶಿಕ್ಷಣವನ್ನು ಸೇರಿಸಬೇಕೆಂದು 'ಶಾಲಾ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು' ಒತ್ತಾಯಿಸಿದ್ದು, 'ಏಕತೆ ಮತ್ತು ಏಕೀಕರಣದ ಮೇಲೆ ಆಧಾರಿತವಾಗಿರುವ ಸಾರ್ವತ್ರಿಕ ಹಾಗು ಶಾಶ್ವತಮೌಲ್ಯಗಳನ್ನು ಶಾಲೆಗಳು ಶ್ರಮದಿಂದಲಾದರೂ ಕಡ್ಡಾಯವಾಗಿ ಉಳಿಸಿಕೊಳ್ಳಬೇಕೆಂದೂ, ಅದರಿಂದ ಜನಸಮುದಾಯವು ತಮ್ಮ ಅಂತರಂಗದಲ್ಲಿನ ಅಮೂಲ್ಯ ನಿಧಿಯನ್ನು ಅರಿಯುವಲ್ಲಿ ಸಹಾಯವಾಗಬೇಕೆಂದು ಪ್ರತಿಪಾದಿಸಿದೆ.'

ಶಾಂತಿ, ಮಾನವೀಯತೆ ಮತ್ತು ಸಹಿಷ್ಣುತೆಯನ್ನು ಬೆಳೆಸುವ ಮೌಲ್ಯಗಳನ್ನು ಉತ್ತೇಜಿಸುವ ಮಾನವರ ಪರಸ್ಪರಾವಲಂಬನೆ ಮತ್ತು ವೈವಿಧ್ಯತೆಗಳ ನಡುವೆ ಇರುವ ಸಮಾನತೆಯ ಪರಿಕಲ್ಪನೆಯೊಂದಿಗಿರುವ ನಮ್ಮ ಬದ್ಧತೆಯನ್ನು ಪುನರುಚ್ಚರಿಸುವ ಅಗತ್ಯವನ್ನು 2005 ರ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು ನಿರೂಪಿಸುತ್ತದೆ.

ವಿವಿಧ ಆಯೋಗಗಳು ಹಾಗೂ ನೀತಿಗಳ ಹೊರತಾಗಿಯೂ ನಮ್ಮ ಸಾಂಪ್ರದಾಯಿಕ ಮತ್ತು ರಾಷ್ಟ್ರೀಯಮೌಲ್ಯಗಳು ಕ್ರಿಯಾತ್ಮಕ ಕಾರ್ಯಕ್ರಮಗಳಾಗಿ ಕಾರ್ಯರೂಪಕ್ಕಿಳಿಯಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಮುಖ್ಯವಾಗಿ ಮೌಲ್ಯಾಧಾರಿತ ಶಿಕ್ಷಣವನ್ನು ಇಂದಿಗೂ ಒಂದು ಹೆಚ್ಚುವರಿ ಕಾರ್ಯಕ್ರಮ ಅಥವಾ ಕಾರ್ಯಚಟುವಟಿಕೆಯಾಗಿಯೇ ನೋಡಲಾಗುತ್ತಿದೆ. ಶಿಕ್ಷಣದ ಗುರಿಗಳಿಂದ ಶಿಕ್ಷಣ ಮತ್ತು ಮೌಲ್ಯಗಳನ್ನು ಬೇರ್ಪಡಿಸಲಾಗದು ಎಂಬುದನ್ನು ಮುಖ್ಯವಾಗಿ ಅರಿತು, ಅವುಗಳನ್ನು ಹೆಚ್ಚುವರಿ ಚಟುವಟಿಕೆಗಳೆಂದು ಶಾಲೆಗಳು ಪರಿಗಣಿಸಬಾರದು. ಬೋಧಕರು ತಮ್ಮ ಪಠ್ಯಗಳಲ್ಲಿರುವ ಮೌಲ್ಯಗಳನ್ನು ಹೊರತಂದು, ಅವುಗಳನ್ನು ತರಗತಿಗಳಲ್ಲಿನ ಕಾರ್ಯಚಟುವಟಿಕೆಗಳೊಂದಿಗೆ ಸಂಯೋಜಿಸಲು ಅವರನ್ನು ಪ್ರೋತ್ಸಾಹಿಸಬೇಕು. ಶಾಲೆಗಳು ಈಗಾಗಲೇ ಏನು ಮಾಡುತ್ತಲಿವೆ ಅಥವಾ ಏನು ಮಾಡಬೇಕೆಂಬುದರ ಹಿನ್ನಲೆಯಲ್ಲಿಯೇ ಈ ಹೆಚ್ಚಿನ ಕಾರ್ಯವನ್ನು ಮಾಡಬಹುದು.

ಈ ದೃಷ್ಟಿಯ ಹಿನ್ನಲೆಯಲ್ಲಿಯೇ ರಾಷ್ಟ್ರೀಯಮೌಲ್ಯಗಳ ಪುನರುತ್ಥಾನ ಪ್ರತಿಷ್ಠಾನವು ಪ್ರಾಥಮಿಕ ಶಾಲಾ ಮಕ್ಕಳ ಶಿಕ್ಷಣಕ್ಕಾಗಿ ಮೌಲ್ಯಾಧಾರಿತ ಶಿಕ್ಷಣದ ಪಠ್ಯಕ್ರಮವನ್ನು ಸಿದ್ಧಪಡಿಸಿದೆ.

# ಅಧ್ಯಕ್ಷರಿಂದ ಸಂದೇಶ

ಮೊಟ್ಟಮೊದಲಿಗೆ ಮಗುವು ತನ್ನ ಹೆತ್ತವರಿಂದ ಹಾಗೂ ಮನೆಯ ಹಿರಿಯರಿಂದ ಉತ್ತಮಮೌಲ್ಯಗಳನ್ನು ಅಂತರ್ಗತ ಮಾಡಿಕೊಳ್ಳುತ್ತದೆ. ಒಮ್ಮೆ ಮಗುವು ಕುಟುಂಬದ ಪರಿಧಿಯಿಂದ ಹೊರಬಂದ ನಂತರ, ಮನೆಗಿಂತ ಹೆಚ್ಚುಸಮಯವನ್ನು ಶಾಲೆಯ ಕಲಿಯುವಿಕೆಯಲ್ಲಿ ಕಳೆಯುತ್ತದೆ. ಈ ಮೊದಲ ರಚನಾತ್ಮಕ ವರ್ಷಗಳು ಅಂತಿಮವಾಗಿ ವ್ಯಕ್ತಿಯ ವ್ಯಕಿತ್ವ ಹಾಗು ಮೌಲ್ಯಗಳನ್ನು ಸುಂದರವಾಗಿಯೂ, ಸುಭದ್ರವಾಗಿಯೂ ನಿರ್ಮಿಸಿ ರೂಪಿಸುತ್ತದೆ.

ನಮ್ಮ ಎಲ್ಲಾ ಧರ್ಮಗಳಲ್ಲಿಯೂ ಹುದುಗಿರುವ ಉತ್ತಮಮೌಲ್ಯಗಳು ನಮ್ಮಲ್ಲಿ ಅಂತರ್ಗತವಾಗಿ ಬೆಳೆದುಬಂದಿವೆಯಾದರೂ, ನಮ್ಮ ಬಹುಧಾರ್ಮಿಕ ಸಾಮಾಜಿಕ ಹಿನ್ನಲೆಯಲ್ಲಿ ಶಾಲೆಗಳಲ್ಲಿ ಅದನ್ನು ಒಂದು ಪಠ್ಯವಾಗಿ ಕಲಿಸಲು ಸಾಧ್ಯವಿಲ್ಲ. ಹೀಗಿದ್ದರೂ ಕೂಡ ಕಲಿಕೆಯ ಸಂದರ್ಭ ಹಾಗು ಅದರ ಪ್ರಕ್ರಿಯೆಗಳಲ್ಲಿ ಮೌಲ್ಯಗಳನ್ನು ಹೇಗಾದರೂ ಸೇರಿಸಿ ಪೋಷಿಸಬೇಕು. ರಾಷ್ಟ್ರಪ್ರೇಮ, ಹಿರಿಯರು ಮತ್ತು ಶಿಕ್ಷಕರಲ್ಲಿ ಗೌರವ, ಪರಾನುಭೂತಿ ಮತ್ತು ಇತರರ ಬಗ್ಗೆ ಕಾಳಜಿ, ಸತ್ಯಸಂಧತೆ, ದಿಟ್ಟತೆ ಮುಂತಾದ ಉತ್ತಮ ಮೌಲ್ಯಗಳು ಮಗುವಿನಲ್ಲಿ ಬೇರೂರುವಂತೆ ಮಾಡಬೇಕು. ಉತ್ತಮ ನೀತಿಕತೆಗಳು, ಉಪಾಖ್ಯಾನಗಳ ಮೂಲಕ ಹಾಗೂ ತಮ್ಮ ಸ್ವಂತ ಅನುಭವದ ನಿದರ್ಶನಗಳನ್ನು ಮಕ್ಕಳಿಗೆ ನೀಡುವುದರ ಮೂಲಕ ಶಿಕ್ಷಕರು ಇದನ್ನು ಸಾಧಿಸಬಹುದಾಗಿದೆ.

ನೈತಿಕತೆ, ಉತ್ತಮಮೌಲ್ಯಗಳು ಮತ್ತು ನೀತಿತತ್ತ್ವಗಳನ್ನು ಯುವಮನಸ್ಸುಗಳಿಗೆ ಯಾವರೀತಿ ತಲುಪಿಸಬೇಕು ಎಂದು ಮಾರ್ಗದರ್ಶನ ನೀಡುವ ಉದ್ದೇಶದಿಂದಲೇ ರಾಷ್ಟ್ರೀಯಮೌಲ್ಯಗಳ ಪುನರುತ್ಥಾನ ಪತಿಷ್ಠಾನವು ಈ ಶಿಕ್ಷಕರ ಕೈಪಿಡಿಯನ್ನು ಹೊರತಂದಿದೆ. ಕೇವಲ ಕೈಪಿಡಿಗಳ ಸಹಾಯದಿಂದ ಶಿಕ್ಷಕರು ಇದನ್ನೆಲ್ಲಾ ಸಾಧಿಸಿ ಪೂರೈಸಲು ಸಾಧ್ಯವಿಲ್ಲ ಎಂಬುದನ್ನು ಕೂಡ ನಾವು ಅರಿತಿದ್ದೇವೆ.

ಇದಕ್ಕೆ ಅಗತ್ಯವಿರುವ ತರಬೇತಿಯನ್ನು ಶಿಕ್ಷಕರು ಸ್ವತ: ಪಡೆದು ತಮ್ಮ ದೃಷ್ಟಿಯನ್ನು ಈ ಉದಾತ್ತ ಧ್ಯೇಯದೆಡೆ ಹರಿಸಬೇಕು. ಮೌಲ್ಯಾಧಾರಿತ ಶಿಕ್ಷಣವನ್ನು ಶಾಲೆಗಳಲ್ಲಿ ಪ್ರತ್ಯೇಖವಾಗಿ ಕಲಿಸಬೇಕಾದ ಒಂದು ವಿಷಯವನ್ನಾಗಿ ನಾವು ಪರಿಗಣಿಸುವುದಿಲ್ಲ. ಸಾಮಾನ್ಯವಾಗಿ ಇತರ ಪಠ್ಯಗಳನ್ನು ಬೋಧಿಸುವುದರ ಜೊತೆಜೊತೆಯಲ್ಲಿಯೇ ಮೌಲ್ಯಗಳನ್ನು ಕೂಡ ಬೇರೂರಿಸಬೇಕು.

ಈ ನಿಟ್ಟಿನಲ್ಲಿ ಇದು ರಾಷ್ಟ್ರೀಯಮೌಲ್ಯಗಳ ಪುನರುತ್ಥಾನ ಪ್ರತಿಷ್ಠಾನದ ಮೊಟ್ಟ ಮೊದಲ ಪ್ರಯತ್ನ. ಈ ಕ್ಷೇತ್ರದಲ್ಲಿ ಗಳಿಸಿದ ಅನುಭವಗಳ ಆಧಾರದ ಮೇಲೆ ನಾವು ಈ ಕೈಪಿಡಿಯ ವ್ಯಾಪ್ತಿಯನ್ನು ಮುಂದೆ ಮಾರ್ಪಡಿಸಿ ವಿಸ್ತರಿಸಬಹುದು.

ಶಿಕ್ಷಕರಿಗೆ ತರಬೇತಿ ನೀಡುವ ಒಂದು ಭಾಗವಾಗಿ ಈ ಶಿಕ್ಷಕರ ಕೈಪಿಡಿಯನ್ನು ಎಲ್ಲಾ ರಾಜ್ಯಸರ್ಕಾರಗಳು ಹಾಗು ಪ್ರೌಢಶಿಕ್ಷಣ ಮಂಡಳಿಯು ಅಂಗೀಕರಿಸುತ್ತದೆ ಎಂದು ನಾನು ಆಶಿಸುತ್ತೇನೆ.

(ಡಾ. ಇ. ಶ್ರೀಧರನ್)

ಅಧ್ಯಕ್ಷರು

## ಕೈಪಿಡಿ – ಒಂದು ಪರಿಚಯ

- ಮುಖ್ಯವಾಗಿ ಶಿಕ್ಷಕರನ್ನು ಗುರಿಯಾಗಿರಿಸಿಕೊಂಡ ಈ ಕೈಪಿಡಿಯು ಮೌಲ್ಯಾಧಾರಿತ ಶಿಕ್ಷಣಕ್ಕಾಗಿ ವ್ಯಾಪಕವಾದ ಮಾರ್ಗಸೂಚಿಯನ್ನು ಒದಗಿಸುತ್ತದೆ.
- ಶಿಕ್ಷಕರಿಗೆ ಹಾಗೂ ಶಿಕ್ಷಣತಜ್ಞರಿಗೆ ಮೌಲ್ಯಾಧಾರಿತ ಶಿಕ್ಷಣಕ್ಷೇತ್ರದಲ್ಲಿ ಈ ಕೈಪಿಡಿಯು ಒಂದು ಪ್ರಮುಖ ಸಾಧನವಾಗಿದೆ. ಇದನ್ನು ಶಿಕ್ಷಕರ ತರಬೇತಿಗೂ ಕೂಡ ಸಾಮಾನ್ಯವಾಗಿ ಬಳಸಬಹುದಾಗಿದೆ.
- ನಿರ್ದಿಷ್ಟವಾದ ಅಗತ್ಯತೆಗಳಿಗೆ ಅನುಗುಣವಾಗಿ ಇದನ್ನು ಸಿದ್ಧಪಡಿಸಲಾಗಿದ್ದು, ಮೌಲ್ಯಾಧಾರಿತ ಶಿಕ್ಷಣಕ್ಕೆ ಅವಶ್ಯವಿರುವ ವಿಶೇಷವಾದ ಜ್ಞಾನ, ಕೌಶಲತೆ ಹಾಗು ಸಾಧನಗಳನ್ನು ಒದಗಿಸುತ್ತದೆ.
- ಈ ಕೈಪಿಡಿಯಲ್ಲಿ ಒಳಗೊಂಡಿರುವ ಪ್ರತಿಯೊಂದು ಮೌಲ್ಯಗಳು ಆ ಮೌಲ್ಯವನ್ನು ಕಲಿಸಲು ಬಳಸಬೇಕಾದ ವಿಧಾನವನ್ನು ವಿವರಿಸುತ್ತದೆ.
- ಈ ಕೆಳಕಂಡ ವಿಧಾನದಲ್ಲಿ ಈ ಕೈಪಿಡಿಯನ್ನು ರೂಪಿಸಲಾಗಿದೆ. ಸಂಕ್ಷಿಪ್ತ ಪರಿಚಯದ ನಂತರ ಮೌಲ್ಯಾಧಾರಿತಶಿಕ್ಷಣದ ಕೆಲವು ಪರಿಕಲ್ಪನೆಗಳು ಮತ್ತು ವಿಧಾನಗಳೊಂದಿಗೆ ಶಿಕ್ಷಕರನ್ನು ಪರಿಚಿತಗೊಳಿಸಲಾಗುತ್ತದೆ.
- ಸೈದ್ಧಾಂತಿಕ ಹಿನ್ನಲೆಯು ಸಂಕ್ಷಿಪ್ತವಾಗಿದ್ದು ಮಾಹಿತಿಪೂರ್ಣವಾಗಿರುತ್ತದೆ.
- ಮೌಲ್ಯಾಧಾರಿತಶಿಕ್ಷಣದಲ್ಲಿ ಬಳಸಬಹುದಾದ ಹಲವು ವಿಧಾನಗಳ ವಿವರಣೆಗಳು ಹಾಗೂ ನಿದರ್ಶನಗಳನ್ನು ಈ ಕೈಪಿಡಿಯ ತಿರುಳು ಒಳಗೊಂಡಿದ್ದು ಅವುಗಳನ್ನು ಸುಲಭವಾಗಿ ಅಭ್ಯಸಿಸಬಹುದಾಗಿದೆ. ಶೈಕ್ಷಣಿಕಸಾಮಗ್ರಿಗಳು ಮತ್ತು ಸಾಧನಗಳನ್ನು ತಾವೆ ಸ್ವತ: ಅಭಿವೃದ್ಧಿಪಡಿಸಿಕೊಳ್ಳಲು ಅಗತ್ಯವಿರುವ ಸಂಕ್ಷಿಪ್ತ ಸಲಹೆಗಳೊಂದಿಗೆ ಈ ಕೈಪಿಡಿಯು ಮುಕ್ತಾಯವಾಗುತ್ತದೆ.

# ರಾಷ್ಟ್ರೀಯಮೌಲ್ಯಗಳ ಪುನರುತ್ಥಾನ ಪ್ರತಿಷ್ಠಾನ ಮತ್ತು ಮೌಲ್ಯಾಧಾರಿತಶಿಕ್ಷಣ ಕಾರ್ಯಕ್ರಮದ ಬಗ್ಗೆ ಒಂದು ಪರಿಚಯ

ರಾಷ್ಟ್ರೀಯಮೌಲ್ಯಗಳ ಪುನರುತ್ಥಾನ ಪ್ರತಿಷ್ಠಾನವು ಸಾಮಾಜಿಕಮೌಲ್ಯಗಳು, ನೈತಿಕತೆ ಮತ್ತು ಜವಾಬ್ದಾರಿಯುತಜೀವನವನ್ನು ಬೆಳೆಸುವಲ್ಲಿ ಭಾರತೀಯ ಗುಣಮಟ್ಟವನ್ನು ನಿಗಧಿಪಡಿಸುವ ಸಂಸ್ಥೆಯಾಗಿದೆ. ಮೆಟ್ರೊ – ಮ್ಯಾನ್ ಎಂದೇ ಪ್ರಸಿದ್ಧರಾಗಿರುವ ಡಾ. ಈ. ಶ್ರೀಧರನ್‌ರವರು ಈ ಸಂಸ್ಥೆಯ ಸ್ಥಾಪಕರಾಗಿದ್ದು ಅದರ ಅಧ್ಯಕ್ಷರು ಕೂಡ ಆಗಿರುತ್ತಾರೆ. 2008 ರಲ್ಲಿ ನೋಂದಾಯಿಸಲ್ಪಟ್ಟ ಈ ಸಂಸ್ಥೆಯ ಏಕೈಕ ಗುರಿಯು ರಾಷ್ಟ್ರೀಯಮೌಲ್ಯಗಳ ಪುನಸ್ಥಾಪನೆ ಹಾಗೂ ಜೀವನದ ಎಲ್ಲಾ ಹಂತಗಳಲ್ಲಿಯೂ ನೈತಿಕತೆಯನ್ನು ಮತ್ತು ಸಮಗ್ರತೆಗಳನ್ನು ಪೋಷಿಸುವುದಾಗಿದೆ.

ರಾಷ್ಟ್ರೀಯಮೌಲ್ಯಗಳ ಪುನರುತ್ಥಾನ ಪ್ರತಿಷ್ಠಾನವು ಈಗಾಗಲೇ ರಾಷ್ಟ್ರಧ್ವಜ, ರಾಷ್ಟ್ರೀಯ ಧ್ಯೇಯವಾಕ್ಯ – 'ಸತ್ಯಮೇವಜಯತೆ'ಗಳಲ್ಲಿ ಪ್ರತಿಪಾದಿತವಾಗಿರುವ ರಾಷ್ಟ್ರೀಯಮೌಲ್ಯಗಳನ್ನು ಹಾಗೂ ಭಾರತ ಸಂವಿಧಾನದಲ್ಲಿ ಪ್ರತಿಪಾದಿಸಿರುವ ಮೂಲಭೂತ ಕರ್ತವ್ಯಗಳನ್ನು ಬೆಂಬಲಿಸುತ್ತದೆ. ಇವುಗಳಲ್ಲಿ ಕೆಲವು ಸನಾತನವೂ ಸಾರ್ವಕಾಲಿಕವೂ ಆದವುಗಳಾಗಿವೆ : ಸತ್ಯಸಂಧತೆ, ಅಹಿಂಸೆ, ನೀತಿವಂತನಡವಳಿಕೆ ಹಾಗು ಭೂಮಿಯ ನೈಸರ್ಗಿಕ ಸಮೃದ್ಧಿ ಹಾಗು ಜೀವಶಕ್ತಿಯ ಸಂರಕ್ಷಣೆ ಇತ್ಯಾದಿ. ಇನ್ನಿತರ ಸಮಕಾಲೀನ ಮೌಲ್ಯಗಳನ್ನು ಕೂಡ ಸಂಸ್ಥೆಯು ಉತ್ತೇಜಿಸುತ್ತದೆ. ಅವುಗಳು : ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಸೂಕ್ಷ್ಮತೆ, ತಂಡದಲ್ಲಿ ಕೆಲಸ, ಶಿಸ್ತು, ಜವಾಬ್ದಾರಿ ಮತ್ತು ಆತ್ಮಗೌರವದ ಜೊತೆ ಇತರರ ಬಗ್ಗೆ ಗೌರವ ಭಾವನೆ.

ನಮ್ಮ ಪರಿಸರವಿಜ್ಞಾನ, ಸಹನಾಗರಿಕರು, ನೈರ್ಮಲ್ಯ ಮತ್ತು ಸ್ವಚ್ಛತೆ, ಶಿಸ್ತು, ರಾಷ್ಟ್ರಪ್ರೇಮ ಇವುಗಳಿಗೆ ನಮ್ಮ ವಿದ್ಯಾರ್ಥಿಸಮುದಾಯವನ್ನು ಸಂವೇದನಾಶೀಲಗೊಳಿಸುವುದು ಈ ಸಂಸ್ಥೆಯ ಪ್ರಾಥಮಿಕ ಉದ್ದೇಶವಾಗಿದೆ. ಮೌಲ್ಯಾಧಾರಿತ ಬದುಕಿಗೆ ಅನುಕೂಲವಾಗುವಂತಹ ಶಿಕ್ಷಣಪರಿಸರವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಮೌಲ್ಯಾಧಾರಿತ ಶಿಕ್ಷಣಕಾರ್ಯಕ್ರಮವು ಪ್ರಯತ್ನಿಸುತ್ತಿದೆ.

ಇದು ಎಲ್ಲಾ ಭಾಗಿದಾರರು ರೂಢಿಸಿಕೊಳ್ಳಬೇಕಾದ ಮೌಲ್ಯಗಳನ್ನು ಗುರುತಿಸುತ್ತದೆ ಹಾಗು ಮೌಲ್ಯಾಧಾರಿತ ಜೀವನ ನಿರ್ವಹಣೆಗೆ ಅಗತ್ಯವಾದ ಪರಿಸರವನ್ನು ಒಟ್ಟಾರೆಯಾಗಿ ಸೃಷ್ಟಿಸುತ್ತದೆ. ಈ ರೀತಿಯಾಗಿ ಪ್ರತಿಯೊಂದು ಪರಿಸರ ವ್ಯವಸ್ಥೆಯನ್ನು ಒಂದು ಜೀವಂತ ಮೌಲ್ಯಾಧಾರಿತ ವ್ಯವಸ್ಥೆಯುನ್ನಾಗಿಸಲು ಪ್ರೋತ್ಸಾಹಿಸುತ್ತದೆ.

ನಮ್ಮ ದೇಶದ ಶಾಲೆಗಳಲ್ಲಿ ಮೌಲ್ಯಾಧಾರಿತಶಿಕ್ಷಣ ಪದ್ಧತಿಯನ್ನು ಸೃಷ್ಟಿಸುವುದನ್ನೇ ತನ್ನ ಪ್ರಮುಖ ಗುರಿಯನ್ನಾಗಿರಿಸಿಕೊಂಡ ಈ ಸಂಸ್ಥೆಯು ಹಲವು ಪಾಲುದಾರರೊಡಗೂಡಿ ಕಳೆದ ಎಂಟು ವರ್ಷಗಳಿಂದ ಹಲವು ಚರ್ಚಾಸಭೆಗಳು, ಕಾರ್ಯಾಗಾರಗಳು ಮತ್ತು ಗೋಷ್ಠಿಗಳನ್ನು ನಡೆಸುತ್ತಾ ಬಂದಿದ್ದು, ಶಾಲೆಗಳಲ್ಲಿ ಮೌಲ್ಯಗಳನ್ನು ಬಿತ್ತಲು ಒಂದು ಸದೃಢವಾದ ಯೋಜನೆಯುನ್ನು ಅಭಿವೃದ್ಧಿಪಡಿಸಿದೆ.

- ಈ ಸಂಸ್ಥೆಯು ಈಗಾಗಲೇ ಮೌಲ್ಯಾಧಾರಿತಶಿಕ್ಷಣ ಕುರಿತ ಒಂದು ಪ್ರಾಯೋಗಿಕಯೋಜನೆಯನ್ನು ದೆಹಲಿಯ ನಾಲ್ಕು ಸರಕಾರಿ ಶಾಲೆಗಳಲ್ಲಿ , ಈ ಕೆಳಕಂಡ ಅಂಶಗಳನ್ನು ಒಳಗೊಂಡ ಶಿಕ್ಷಣ ನಿರ್ದೇಶನಾಲಯದ ಅನುಮತಿಯೊಂದಿಗೆ ಯಶಸ್ವಿಯಾಗಿ ಸಿದ್ಧಪಡಿಸಿದೆ.
- ತಮ್ಮ ಬೋಧನೆಯಲ್ಲಿ ಮೌಲ್ಯಗಳನ್ನು ಪ್ರತಿಪಾದಿಸಿ, ಅವುಗಳನ್ನು ಮಕ್ಕಳಲ್ಲಿ ಅಂತರ್ಗತಗೊಳಿಸುವಂತೆ ಶಿಕ್ಷಕರನ್ನು ಉತ್ತೇಜಿಸಿ ಪ್ರೇರೇಪಿಸುವಂತಹ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುವುದು.
- ಕಥಾನಿರೂಪಣೆ, ವಿವಿಧಪಾತ್ರನಿರ್ವಹಣೆ, ಪ್ರಕರಣಗಳ ಅಧ್ಯಯನ ಹಾಗು ಕ್ರೀಡೆಗಳಂತಹ ಮಕ್ಕಳ ಕಾರ್ಯಚಟುವಟಿಕೆಗಳ ಸಹಾಯದಿಂದ ಉತ್ತಮಮೌಲ್ಯಗಳ ಪ್ರತಿಪಾದನೆ.
- ಶಾಲಾಮಕ್ಕಳಸಮುದಾಯ, ಅವರ ಪೋಷಕರು ಹಾಗೂ ಶಿಕ್ಷಕರು ಎಲ್ಲರೂ ನಿರಂತರವಾಗಿ ಭಾಗಿಗಳಾಗುವಂತಹ ಸಮುದಾಯ ಆಧಾರಿತ ಕಾರ್ಯಚಟುವಟಿಕೆಗಳನ್ನು ನಡೆಸುವುದರಿಂದ ಎಲ್ಲಾ ಭಾಗಿದಾರರು ಈ ಉತ್ತಮಮೌಲ್ಯಗಳನ್ನು ಎತ್ತಿಹಿಡಿಯುವುದರಲ್ಲಿ ಭಾಗಿಗಳಾಗಿ ಸಾಮೂಹಿಕ ಒಡೆತನ ಉಂಟಾಗುವಂತೆ ಮಾಡುವುದು.

# ಬೋಧಕರಿಗೆ ಸೂಚನೆಗಳು

ಪಠಣ : ಈ ಕೈಪಿಡಿಯನ್ನು ಸಂಪೂರ್ಣವಾಗಿ ಓದಿ, ಅದರ ಉದ್ದೇಶವನ್ನು ಅರ್ಥಮಾಡಿಕೊಳ್ಳಿ. ಮಕ್ಕಳ ಸರ್ವತೋಮುಖ ವಿಕಾಸವೇ ಕೇಂದ್ರಿಕೃತವಾದ, ಅವರ ಅಭಿವೃದ್ಧಿಗೆ ಸೂಕ್ತವಾದ ಹಾಗೂ ಸಕ್ರಿಯ ಕಲಿಕೆಯವಿಧಾನವನ್ನು ಅರ್ಥಮಾಡಿಕೊಳ್ಳುವ ಅತ್ಯಗತ್ಯತೆ ಶಿಕ್ಷಕರಿಗಿದೆ.

ಟಿಪ್ಪಣಿಗಳನ್ನು ಮಾಡಿಕೊಳ್ಳುವುದು : ಶಿಕ್ಷಕರು ತಮ್ಮ ತರಗತಿಗಳ ಕಾರ್ಯನಿರ್ವಹಣೆ ಹಾಗೂ ಪಠ್ಯಗಳ ಬೋಧನೆಗನುಗುಣವಾಗಿ ಮುಂಚಿತವಾಗಿಯೇ ಟಿಪ್ಪಣಿಗಳನ್ನು ಮಾಡಿಕೊಳ್ಳುವ ಅಗತ್ಯತೆಯಿದ್ದು, ಈ ಕೈಪಿಡಿಯ ಓದು ಅದರಲ್ಲಿ ಅವರಿಗೆ ಸಹಾಯವಾಗುತ್ತದೆ.

ಸಿದ್ಧತೆ : ಪ್ರತಿಯೊಂದು ವಿಷಯಾಧಾರಿತ ಯೋಜನೆಯು ಅದಕ್ಕೆ ಅಗತ್ಯವಿರುವ ಪಠ್ಯಸಾಮಗ್ರಿಗಳ ವಿವರಗಳನ್ನು ಕೂಡಾ ನೀಡುತ್ತದೆ. ಇದರಿಂದ ವಿವಿಧ ಕಾರ್ಯಚಟುವಟಿಕೆಗಳಿಗೆ ಅಗತ್ಯವಿರುವ ಸಾಮಗ್ರಿಗಳೊಡನೆ ಶಿಕ್ಷಕರು ಮುಂಚಿತವಾಗಿಯೇ ಸಿದ್ಧರಿರಬಹುದು.

ಅವಲೋಕನ : ಶಿಕ್ಷಕರು ತಮ್ಮ ನಡವಳಿಕೆಯನ್ನು ನಿಯಮಿತವಾಗಿ ದಿನ/ವಾರಕ್ಕೊಮ್ಮೆ ಅವಲೋಕಿಸಿಕೊಳ್ಳುವುದು ಬಹುಮುಖ್ಯ ಹಾಗೂ ಒಬ್ಬ ಸಾಧಕರಾಗಿ/ಮಾದರಿ ಶಿಕ್ಷಕರಾಗಿ ತಮ್ಮದೇ ಆದ ಪ್ರಗತಿಯನ್ನು ಕುರಿತು ಟಿಪ್ಪಣಿಗಳನ್ನು ಸಹ ಮಾಡುವುದು ಸೂಕ್ತ.

## 6.1.1 ರಾಷ್ಟ್ರೀಯ ಧ್ಯೇಯವಾಕ್ಯ : ಸತ್ಯಮೇವ ಜಯತೆ



- 'ಸತ್ಯಮೇಯ ಜಯತೆ' – ಇದು ನಮ್ಮ ರಾಷ್ಟ್ರೀಯ ಧ್ಯೇಯವಾಕ್ಯ.
- ಈ ಧ್ಯೇಯವಾಕ್ಯವನ್ನು ಉಪನಿಷತ್ತಿನಿಂದ ಅಳವಡಿಸಿಕೊಳ್ಳಲಾಗಿದೆ.
- ಜನವರಿ **26, 1950** ರಂದು ಅಳವಡಿಸಿಕೊಳ್ಳಲಾದ ಈ ಧ್ಯೇಯವಾಕ್ಯವನ್ನು ನಮ್ಮ ರಾಷ್ಟ್ರಲಾಂಛನದಡಿ ಸಂಸ್ಕೃತ ಭಾಷೆಯಲ್ಲಿ ಕೊರೆಯಲಾಗಿದೆ.
- ಈ 'ಸತ್ಯಮೇವ ಜಯತೆ' ಧ್ಯೇಯವಾಕ್ಯವನ್ನು ಎಲ್ಲಾ ಭಾರತೀಯ ನೋಟುಗಳ ಒಂದು ಬದಿಯಲ್ಲಿ ಕಾಣಬಹುದು.
- ಭಾರತದ ಸುಪ್ರಸಿದ್ಧ ಶಿಕ್ಷಣ ತಜ್ಞ, ಬನಾರಸ್‌ಹಿಂದೂವಿಶ್ವವಿದ್ಯಾಲಯದ ಸ್ಥಾಪಕರೂ ಮತ್ತು ಸ್ವಾತಂತ್ರ್ಯಹೋರಾಟಗಾರರೂ ಆದ ಪಂಡಿತ ಮದನ್ ಮೋಹನ್ ಮಾಳವೀಯ ಅವರು **1918** ರ ಸ್ವಾತಂತ್ರ್ಯಸಂಗ್ರಾಮದ ಸಂದರ್ಭದಲ್ಲಿ ಈ ಘೋಷಣೆಯನ್ನು ಜನಪ್ರಿಯಗೊಳಿಸಿದರು.

## 6.1.2 ಸತ್ಯಸಂಧತೆ

ಸತ್ಯಸಂಧತೆ ಎಂದರೆ ಸಾಮನ್ಯವಾಗಿ ಸತ್ಯಹೇಳುವುದು ಎಂದರ್ಥ. ಅಂದರೆ ಕಾಯ, ವಾಚ, ಮನಸಾ ಸತ್ಯಶುದ್ಧವಾಗಿರುವುದು. ಕೇವಲ ಬಾಯಿಯಲ್ಲಿ ಸತ್ಯವನ್ನು ಹೇಳುತ್ತಾ ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವವರನ್ನು ಸತ್ಯಸಂಧರು ಎಂದು ಹೇಳಲಾಗುವುದಿಲ್ಲ.

ಉದ್ದೇಶ :

- ಸತ್ಯಹೇಳುವುದರ ಪ್ರಾಮುಖ್ಯತೆಯನ್ನು ಅರಿಯುವುದು.
- ವೈಯಕ್ತಿಕ ಜವಾಬ್ದಾರಿ, ಸತ್ಯಸಂಧತೆ, ಶಿಕ್ಷೆ ಮತ್ತು ಅದರ ಪರಿಣಾಮಗಳನ್ನು ಇತಿಹಾಸ, ಶಾಲೆಗಳು ಮತ್ತು ಸಮುದಾಯಗಳ ಉದಾಹರಣೆಗಳ ಮೂಲಕ ಅರಿಯುವುದು.

ವಿಧಾನ : ಕಥಾನಿರೂಪಣೆ, ಪಾತ್ರನಿರ್ವಹಣೆ ಮತ್ತು ಚರ್ಚೆಗಳು

ಸಮಯ : **40** ನಿಮಿಷಗಳು

### ಚಟುವಟಿಕೆ 1 : ಅನವರತ ಸತ್ಯಸಂಧರಾಗಿರಿ

ಒಂದುದಿನ ಪುಟ್ಟ ಬಾಲೆ ಖುಷಿ ಮನೆಯಲ್ಲಿ ಒಬ್ಬಳೆ ಇದ್ದಳು. ಅವಳ ತಂದೆತಾಯಿಯರು ಯಾವುದೋ ಮದುವೆಸಮಾರಂಭಕ್ಕೆ ಹೋಗಿದ್ದರು. ತಂದೆಯ ಮೇಜಿನ ಮೇಲಿದ್ದ ಅವರ ಮೊಬೈಲ್‌ಫೋನನ್ನು ಖುಷಿ ನೋಡಿದಳು. ಅದನ್ನು ಕೈಗೆತೆಗೆದುಕೊಂಡ ಅವಳು ಅದರೊಂದಿಗೆ ಆಡಲು ಆರಂಭಿಸಿದಳು. ಆದರೆ ಬೀಗಮುದ್ರೆಹಾಕಲಾಗಿದ್ದ ಫೋನಿನ ಗುಪ್ತಪದ ತಿಳಿಯದ ಅವಳು ಅದರ ಹಲವಾರು ಗುಂಡಿಗಳನ್ನು ಯಾದ್ರಿಚ್ಛಿಕವಾಗಿ ಒತ್ತಲಾರಂಬಿಸಿದಳು. ಫೋನಿನ ಪರದೆಯ ಮೇಲೆ ಬರುತ್ತಿದ ವಿಚಿತ್ರ ಸಂದೇಶವನ್ನು ಕಂಡು ಹೆದರಿದ ಅವಳು ಫೋನನ್ನು ಹಾಗೆಯೇ ಮೇಜಿನ ಮೇಲೆ ಬಿಟ್ಟುಬಿಟ್ಟಳು.

ಮರುದಿನ ತಂದೆಯು ಫೋನ್ ಬಗ್ಗೆ ವಿಚಾರಿಸಿದಾಗ ಅವಳು ಅದರೊಡನೆ ಆಟವಾಡಲು ಪ್ರಯತ್ನಪಟ್ಟಿದಾಗಿಯೂ, ಆ ಪ್ರಕ್ರಿಯೆಯಲ್ಲಿ ಫೋನಿನ ಕಾರ್ಯನಿರ್ವಹಣೆ ನಿರ್ಬಂಧಿತವಾಯಿತೆಂದು ತನ್ನ ತಪ್ಪನ್ನು ಒಪ್ಪಿಕೊಂಡಳು.

ಮಗಳ ಸತ್ಯಸಂಧತೆಗೆ ಮೆಚ್ಚಿದ ತಂದೆ ಅವಳಿಗೆ ಮೆಚ್ಚುಗೆ ಸೂಚಿಸಿದರು ಹಾಗೂ ಬಳಕೆ ತಿಳಿಯಿದ ವಸ್ತುಗಳಿಗೆ ಕೈಹಾಕಬಾರದೆಂದು ಅವಳಿಗೆ ತಿಳಿಹೇಳಿದರು.

**ಚಟುವಟಿಕೆ 2 : ಪಾತ್ರನಿರ್ವಹಣೆ – ಸತ್ಯಸಂಧತೆ**

ತರಗತಿಯಲ್ಲಿ ಪಾತ್ರನಿರ್ವಹಣಾ ದೃಶ್ಯಗಳ ಮೂಲಕ ಸತ್ಯ ನುಡಿಯುವುದು ಮತ್ತು ಅಸತ್ಯ ನುಡಿಯುವುದರ ನಡುವೆ ಮಕ್ಕಳೇ ನಿರ್ಧರಿಸುವುದು. ಇಬ್ಬರು ಮಕ್ಕಳು ಈ ಚತುವಟಿಕೆಯಲ್ಲಿ ಪಾತ್ರ ನಿರ್ವಹಿಸಲಿ.

- ಮನೆಗೆಲಸವನ್ನು ಸಮಯಕ್ಕೆ ಸರಿಯಾಗಿ ಮುಗಿಸಬೇಕಿದ್ದ ನೀವು ಅದರಬದಲಿಗೆ ದೂರದರ್ಶನವನ್ನು ವೀಕ್ಷಿಸಿರುವಿರಿ.
- ನಿಮ್ಮ ಮಿತ್ರರೊಬ್ಬರ ಲೇಖನಿಯನ್ನು ನೀವು ಎರವಲಾಗಿ ಪಡೆದು ಅದನ್ನು ಕಳೆದುಕೊಂಡಿರುವಿರಿ.
- ತರಗತಿಯಲ್ಲಿ ಯಾರೂ ತನ್ನನ್ನು ಗಮನಿಸುತ್ತಿಲ್ಲವೆಂದು ತಿಳಿದ ಗೆಳತಿಯೋರ್ವಳು ತನ್ನ ಜೇಬಿನಲ್ಲಿ ಏನನ್ನೋ ಹಾಕಿಕೊಂಡದ್ದನ್ನು ನೀವು ನೋಡಿರುವಿರಿ.

ಇಬ್ಬರು ಮಕ್ಕಳು ಪ್ರಾಮಾಣಿಕ ನಡವಳಿಕೆಯನ್ನು ತೋರುವ ದೃಶ್ಯವನ್ನು ಪ್ರದರ್ಶಿಸುವಮೂಲಕ ವಿದ್ಯಾರ್ಥಿಗಳಿಗೆ ಸರಿಯಾದ ಮಾರ್ಗವನ್ನು ತೋರಿಸಲಿ. ಸತ್ಯವನ್ನು ನುಡಿಯುವುದು ಮತ್ತು ಸರಿಯಾದ ಕೆಲಸವನ್ನು ಮಾಡುವುದರಿಂದ ಮನಸ್ಸಿಗೆ ಸಿಗಬಹುದಾದ ಆನಂದವನ್ನು ಕುರಿತು ವಿದ್ಯಾರ್ಥಿಗಳೊಂದಿಗೆ ಮಾತನಾಡಿ.

# ಪದ್ಯ : ಸತ್ಯಸಂಧತೆ

(ರಚನೆ : ಪಾರುಲ್ ದಾವರ್)

ಸತ್ಯ ನುಡಿಯಿರಿ ನಿರಂತರ,

ಸತ್ಯ ನುಡಿಯುವುದು ಕಷ್ಟ ಬಹಳ,

ಸತ್ಯ ನುಡಿಯುವವರು ಧೈರ್ಯವಂತರು ಬಹಳ,

ಅಸತ್ಯ ನುಡಿಯುವುದು ಸುಲಭ ಬಹಳ,

ಅಸತ್ಯ ನುಡಿಯುವವರು ಹೇಡಿಗಳು ಬಹಳ,

ಹೇಳು ನನಗ ಈಗ !

ಶೂರನೋ ನೀನು ಅಥವ ಹೇಡಿಂಯೋ ?

( ಶಿಕ್ಷಕರು ಪ್ರಶ್ನೆ ಕೇಳುವರು ಮತ್ತು ಮಕ್ಕಳು ಉತ್ತರಿಸುವರು. ಈ ಪ್ರಕ್ರಿಯೆಯನ್ನು ಮೂರು ಬಾರಿ ಪುನರಾವರ್ತಿಸಬೇಕು ಮತ್ತು ಪ್ರತಿಬಾರಿಯೂ ಮಕ್ಕಳು ಜೋರಾಗಿ ಒಕ್ಕೊರಲಿನಿಂದ ಉತ್ತರಿಸಬೇಕು ).

ಸತ್ಯಸಂಧತೆಯ ಫಲ 'ವಿಶ್ವಾಸ', 'ಪ್ರೇಮ'

'ವಾಗ್ವಾದ', 'ಪ್ರತಿಫಲ' ಮತ್ತು 'ಗೌರವ'

ಅಸತ್ಯ ತರುವುದು 'ಅಪನಂಬಿಕೆ', 'ದ್ವೇಷ'

'ಅರುಚಿ', 'ದಂಡನೆ' ಹಾಗು 'ಅಗೌರವ'

ಹೇಳು ನನಗೆ ಈಗ !

ನಿನ್ನ ಆಯ್ಕೆ ಯುವುದೆಂದು ?

ಸತ್ಯವೋ ಅಥವಾ ಅಸತ್ಯವೋ ?

( ಮೊದಲಿನಂತೆ ಪ್ರತಿಬಾರಿಯೂ ಜೋರಾಗಿ ಮೂರು ಬಾರಿ ಪುನರಾವರ್ತನೆ )

## 6.1.2 ನ್ಯಾಯ / ನಿಷ್ಪಕ್ಷಪಾತ

ನಿಷ್ಪಕ್ಷಪಾತವೆಂದರೆ ಕೇವಲ ಒಬ್ಬ ವ್ಯಕ್ತಿಯ ಪರವಾಗಿಲ್ಲದಿರುವುದು ಮತ್ತು ಇದು ಪಾಲ್ಗೊಂಡಿರುವ ಪ್ರತಿಯೊಬ್ಬರಿಗೂ ಯಶಸ್ಸುಗಳಿಸಲು ಸಮಾನಾವಕಾಶ ನೀಡುವುದು. ನಿಮ್ಮ ಮಕ್ಕಳಿಗೆ ನಿಷ್ಪಕ್ಷಪಾತದ ಬಗ್ಗೆ ಅರಿವು ಮೂಡಿಸುವುದು ಬಹಳ ಮುಖ್ಯ, ಏಕೆಂದರೆ ಅದು ನಿಮ್ಮ ಮಕ್ಕಳು ಎಲ್ಲರನ್ನೂ ಸಮಾನವಾಗಿ, ವಿಶ್ವಾಸದಿಂದ ಮತ್ತು ಗೌರವದಿಂದ ಕಾಣುವುದನ್ನು ಖಚಿತಪಡಿಸುತ್ತದೆ.

ನ್ಯಾಯ ಮತ್ತು ನಿಷ್ಪಕ್ಷಪಾತವನ್ನು ಹೀಗೂ ಕೂಡ ವಿವರಿಸಬಹುದಾಗಿದೆ :

- ನೀವು ಇತರರೊಂದಿಗೆ ಆಟವಾಡುವಾಗ, ಯಾವಾಗಲು ಆಟದನಿಯಮಗಳನ್ನು ಪಾಲಿಸಿ.
- ಸರದಿನಿಯಮವನ್ನು ಪಾಲಿಸಿ.
- ಸದಾ ಮುಕ್ತಮನಸ್ಸುಳ್ಳವರಾಗಿದ್ದು ಇತರರ ಮಾತುಗಳಿಗೆ ಗೌರವ ಕೊಡಿ.
- ಇತರರ ಒಳ್ಳೆಯತನವನ್ನು ನಿಮ್ಮ ಲಾಭಕ್ಕಾಗಿ ಬಳಸಿಕೊಳ್ಳಬೇಡಿ.
- ಅನಾವಶ್ಯಕವಾಗಿ ಹಾಗು ನಿರ್ಲಕ್ಷತೆಯಿಂದ ಇತರರನ್ನು ಆರೋಪಿಸಬೇಡಿ.

ಉದ್ದೇಶ :

- ಸತ್ಯಹೇಳುವುದರ ಪ್ರಾಮುಖ್ಯತೆಯನ್ನು ಅರಿಯುವುದು.
- ನ್ಯಾಯ ಮತ್ತು ಅನ್ಯಾಯಗಳ ನಿದರ್ಶನಗಳನ್ನು ತಮ್ಮ ಜೀವನದಲ್ಲಿ ಗುರುತಿಸುವುದು.

ವಿಧಾನ : ಕ್ರೀಡೆಗಳು, ಕಥಾನಿರೂಪಣೆ ಮತ್ತು ಚರ್ಚೆಗಳು

ಸಮಯ : **40** ನಿಮಿಷಗಳು

## ಚಟುವಟಿಕೆ 1 : ಆಟ – ಚಾಕೊಲೆಟ್‌ಗಳ ಪೊಟ್ಟಣ

ಅಗತ್ಯವಿರುವ ವಸ್ತುಗಳು : ಚಾಕೊಲೆಟ್‌ಗಳು

<u>ಸೂಚನೆಗಳು :</u>

ತರಗತಿಯಲ್ಲಿ ಇರುವ ವಿದ್ಯಾರ್ಥಿಗಳ ಒಟ್ಟು ಸಂಖ್ಯೆಗಿಂತ ಐದು ಕಡಿಮೆ ಇರುವ ಚಾಕೊಲೆಟ್ ಪೊಟ್ಟಣವನ್ನು ತೆಗೆದುಕೊಂಡುಬನ್ನಿ. ಪೊಟ್ಟಣವನ್ನು ವಿದ್ಯಾರ್ಥಿಗಳಿಗೆ ಕೊಟ್ಟು ಅದರಿಂದ ಪ್ರತಿಯೊಬ್ಬರೂ ಒಂದೊಂದು ಚಾಕೊಲೆಟನ್ನು ತೆಗೆದುಕೊಳ್ಳುವಂತೆ ಸೂಚಿಸಿ. ಎಲ್ಲರಿಗೂ ಒದಗುವಷ್ಟು ಚಾಕೊಲೆಟ್ ಇಲ್ಲದಿರುವ ಅನ್ಯಾಯದ ಪರಿಸ್ಥಿತಿಯನ್ನು ವಿದ್ಯಾರ್ಥಿಗಳು ಅರಿತಾಗ ಅವರೊಂದಿಗೆ ಈ ಕೆಳಕಂಡ ಪ್ರಶ್ನೆಗಳನ್ನು ಚರ್ಚಿಸಿ :

1. ಚಾಕೊಲೆಟ್ ದೊರಕದ ಮಕ್ಕಳ ಮನಸ್ಥಿತಿ ಹೇಗಿತ್ತು ? ದೊರಕಿದ ಮಕ್ಕಳ ಮನಸ್ಥಿತಿ ಹೇಗಿತ್ತು ?
2. ಈ ಸಮಸ್ಯೆಗೆ ನ್ಯಾಯಯುತವಾದ ಪರಿಹಾರವೇನು ?
3. ಅನ್ಯಾಯಕ್ಕೆ ಒಳಗಾದ, ತಿರಸ್ಕೃತಗೊಂಡ ಜನರ ಮತ್ತೊಂದು ಘಟನೆಯ ಬಗ್ಗೆ ಆಲೋಚಿಸಬಲ್ಲಿರಾ?

## ಚಟುವಟಿಕೆ 2 : ಕಥಾನಿರೂಪಣೆ : ಮುಕ್ತವಾದಪಕ್ಷಿ

ಒಂದು ಪ್ರಾತ:ಕಾಲ ಸಿದ್ದಾರ್ಥನು ಮತ್ತು ಅವನ ಬಂಧು ದೇವದತ್ತ ಇಬ್ಬರೂ ಕಾಡಿನವಾರ್ಗವಾಗಿ ಹಾದುಹೋಗುತ್ತಿದ್ದರು. ಆಕಾಶದಲ್ಲಿ ತೇಲುತ್ತಾ, ಹಾರುತ್ತಿದ್ದ ಒಂದು ಹಂಸಪಕ್ಷಿಯನ್ನು ಸಿದ್ದಾರ್ಥನು ದೇವದತ್ತನಿಗೆ ತೋರಿದನು. ಸಿದ್ದಾರ್ಥನು ತಡೆಯುವಷ್ಟರಲ್ಲಿ ದೇವದತ್ತನ ಬಾಣ ಹಕ್ಕಿಯನ್ನು ಭೇದಿಸಿತು.

ಗಾಯಗೊಂಡ ಹಕ್ಕಿಯು ಕೆಳಗೆ ಬಿದ್ದಿತು. ಇಬ್ಬರು ಬಾಲಕರೂ ಹಕ್ಕಿಯಬಳಿಗೆ ಓಡಿದರು. ವೇಗವಾಗಿ ಹಕ್ಕಿಯ ಬಳಿಗೆ ಮೊದಲು ಬಂದ ಸಿದ್ದಾರ್ಥನು ಗಾಯಗೊಂಡು ವಿಲಿವಿಲಿ ಒದ್ದಾಡುತ್ತಿದ್ದ ಹಂಸಪಕ್ಷಿಯನ್ನು ಮೃದುವಾಗಿ ಮೆಲ್ಲನೆ ಕೈಗೆತೆಗೆದುಕೊಂಡು, ನಿಧಾನವಾಗಿ ಅದರಬಾಣವನ್ನು ತೆಗೆದು ಅದರ ಗಾಯವನ್ನು ಶುಶ್ರೂಷೆಮಾಡಿದನು. ಅಷ್ಟರಲ್ಲಿ ಅಲ್ಲಿಗೆ ಬಂದ ದೇವದತ್ತನು "ಆ ಹಕ್ಕಿಯು ನನ್ನದು, ನನಗೆಕೊಡು" ಎಂದು ಒತ್ತಾಯಿಸಿದನು. ಅದರೆ ಹಕ್ಕಿಯನ್ನು ಅವನಿಗೆ ಕೊಡಲು ಸಿದ್ದಾರ್ಥನ ಮನ ಒಪ್ಪಲಿಲ್ಲ. ದೇವದತ್ತನು ತನ್ನ ಬಂಧುವಾದ ಸಿದ್ದಾರ್ಥನನ್ನು ನ್ಯಾಯಕ್ಕಾಗಿ ನ್ಯಾಯಾಲಯಕ್ಕೆ ಕರೆದೊಯ್ದನು.

"ಹಕ್ಕಿಗೆ ಬಾಣ ಹೊಡೆದು ಬೀಳಿಸಿದ್ದು ನಾನು, ಅದು ನನಗೆ ಸೇರಬೇಕಾದದ್ದು" ಎಂದು ವಾದಿಸಿದನು ದೇವದತ್ತ.

"ಹಕ್ಕಿಯುಗಾಯಗಳಿಗೆ ಶುಶ್ರೂಷೆಮಾಡಿ ಅದರ ಜೀವವುಳಿಸಿದವನು ನಾನು" ಎಂದನು ಸಿದ್ಧಾರ್ಥ.

ಸಿದ್ಧಾರ್ಥನಕೈಯಲ್ಲಿ ಬೆಚ್ಚಗೆಕುಳಿತಿದ್ದ ಹಕ್ಕಿಯನ್ನು ನ್ಯಾಯಾಧೀಶರು ಗಮನಿಸಿದರು.

ಸೂಕ್ಷ್ಮದೃಷ್ಟಿಯ, ಬುದ್ಧಿವಂತ ನ್ಯಾಯಾಧೀಶರು ದೇವದತ್ತನನ್ನು ಕುರಿತು "ನಿನ್ನಬಾಣದಿಂದ ಹಕ್ಕಿಯು ಅಸುನೀಗಿದ್ದರೆ ಅದು ನಿನ್ನದಾಗುತಿತ್ತು. ಆದರೆ ಸಿದ್ಧಾರ್ಥನು ಅದರ ಪ್ರಾಣವುಳಿಸಿದ್ದರಿಂದ ಅದು ಅವನಿಗೆ ಸೇರಬೇಕಾದದ್ದು. ಅದನ್ನು ಕೊಲ್ಲಲುಪ್ರಯತ್ನಪಟ್ಟವರಿಗೆ ಸೇರತಕ್ಕದ್ದಲ್ಲ" ಎಂದು ಹೇಳಿದರು.

ಅಷ್ಟರಲ್ಲಿ ಗಾಯಗೊಂಡ ಹಕ್ಕಿಯು ಸಂಪೂರ್ಣವಾಗಿ ಚೇತರಿಸಿಕೊಂಡಿತ್ತು. ಹೊರಗೆಬಂದ ಸಿದ್ಧಾರ್ಥನು ಹಕ್ಕಿಯನ್ನು ಹಾರಿಬಿಟ್ಟು ಮುಕ್ತಗೊಳಿಸಿದನು. ಸಂತೋಷದಿಂದ ಮತ್ತೆ ಆಕಾಶದಲ್ಲಿ ಹಾರಿಹೋದ ಹಂಸಪಕ್ಷಿಯನ್ನು ನೋಡುತ್ತಾ ಸಿದ್ಧಾರ್ಥನು " ಪಕ್ಷಿಯು ಇನ್ನು ಮುಕ್ತವಾಯಿತು, ಅದು ಯಾರೊಬ್ಬರಿಗೂ ಸೇರತಕ್ಕದ್ದಲ್ಲ" ಎಂದು ನುಡಿದನು. ಹಂಸಪಕ್ಷಿಯು ಮೇಲೆ ಮೇಲೆ ಹಾರುತ್ತಾ ಸಾಗಿತು.

## ಪ್ರಶ್ನೋತ್ತರಗಳು :

1. ದೇವದತ್ತನು ಯಾರು ?
2. ದೇವದತ್ತ ಮತ್ತು ಸಿದ್ಧಾರ್ಥರಲ್ಲಿ ಹೆಚ್ಚು ದಯಾಳುವು ಯಾರು ?
3. ಹಾರಿಹೋಗುತ್ತಿದ್ದ ಹಂಸಪಕ್ಷಿಯನ್ನು ಕಂಡ ದೇವದತ್ತನು ಏನು ಮಾಡಿದನು?
4. ಹಂಸಪಕ್ಷಿಯಜೀವವನ್ನು ಸಿದ್ಧಾರ್ಥನು ಹೇಗೆ ಕಾಪಾಡಿದನು ?
5. ಹಂಸಪಕ್ಷಿಯನ್ನು ಜೀವಂತನೋಡಲು ಬಾಲಕರು ಬಯಸಿದರೆ?
6. ಸಿದ್ಧಾರ್ಥನಿಗೆ ಹಂಸಪಕ್ಷಿಯನ್ನು ಏಕೆ ಕೊಟ್ಟರು ?

ನ್ಯಾಯ, ನಿಷ್ಪಕ್ಷಪಾತಭಾವದ ಅನುಭವಕ್ಕಾಗಿ, ಈ ಕತೆಯನ್ನಾಧರಿಸಿದ ನಾಟಕ/ಲಘುಪ್ರಹಸನವನ್ನು ಶಿಕ್ಷಕರಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಪ್ರದರ್ಶಿಸಬಹುದು.

# 6.2 ರಾಷ್ಟ್ರಧ್ವಜ



- ಪ್ರತಿಯೊಂದು ಸ್ವತಂತ್ರರಾಷ್ಟ್ರವು ತನ್ನದೇ ಆದ ರಾಷ್ಟ್ರಧ್ವಜವನ್ನು ಹೊಂದಿರುತ್ತದೆ.
- ರಾಷ್ಟ್ರಧ್ವಜವು ರಾಷ್ಟ್ರದ ಹೆಗ್ಗುರುತು ಹಾಗೂ ಹೆಮ್ಮೆಯ ಸಂಕೇತ.
- ಅದು ರಾಷ್ಟ್ರದಪ್ರಜೆಗಳ ಸಂಸ್ಕೃತಿ, ಪರಂಪರೆ ಮತ್ತು ಚೇತನಗಳನ್ನು ಸಂಕೇತಿಸುತ್ತದೆ.
- ನಮ್ಮ ತ್ರಿವರ್ಣಧ್ವಜದಲ್ಲಿ : ಮೇಲಿನಪಟ್ಟಿಯಲ್ಲಿನ ಕೇಸರಿಬಣ್ಣವು ದೇಶದ ಸಾಮರ್ಥ್ಯ ಮತ್ತು ಸ್ಥೈರ್ಯವನ್ನು ಸೂಚಿಸುತ್ತದೆ.
- ನಡುವಿನ ಧರ್ಮಚಕ್ರದೊಂದಿಗಿನ ಶ್ವೇತವರ್ಣವು ಶಾಂತಿ ಮತ್ತು ಸತ್ಯವನ್ನು ಸೂಚಿಸುತ್ತದೆ.
- 24 ಕಡ್ಡಿಗಳನ್ನು ಹೊಂದಿರುವ ಧರ್ಮಚಕ್ರವು 'ಕಾನೂನಿನಚಕ್ರ'ವನ್ನು ನಿರೂಪಿಸುತ್ತದೆ.
- ಕೊನೆಯಪಟ್ಟಿಯಲ್ಲಿನ ಹಸಿರುವರ್ಣವು ವಿಶ್ವಾಸ ಮತ್ತು ಪ್ರಗತಿಯನ್ನು ತೋರುತ್ತದೆ.

ವಿದ್ಯಾರ್ಥಿಗಳ ವಯೋಮಾನಕ್ಕನುಗುಣವಾಗಿ ನಾವು ಧ್ವಜದ ಪ್ರತಿಯೊಂದು ವರ್ಣಕ್ಕೂ ತಲಾ ಒಂದು ಮೌಲ್ಯವನ್ನು ಮಾತ್ರ ಕೇಂದ್ರೀಕರಿಸಿದ್ದೇವೆ. ರಾಷ್ಟ್ರಧ್ವಜದಲ್ಲಿನ ಕೇಸರಿವರ್ಣವು ಸಾಮರ್ಥ್ಯವನ್ನು ಸೂಚಿಸುವುದು ಎಂಬ ಅಂಶವು ನಮಗೆಲ್ಲ ತಿಳಿದಿರುವುದು. ಅದ್ದರಿಂದ 'ಶಕ್ತಿ ಮತ್ತು ಆರೋಗ್ಯಕರ' ಎಂಬ ಮೌಲ್ಯಗಳನ್ನು ಪಠ್ಯದಲ್ಲಿ ಅಳವಡಿಸಿಕೊಳ್ಳಲಾಗಿದೆ. ಅದೇರೀತಿ 'ಸ್ವಚ್ಛತೆ'ಯನ್ನು ಶ್ವೇತವರ್ಣಕ್ಕನುಗುಣವಾಗಿಯೂ ಮತ್ತು ಹಸಿರುವರ್ಣಕ್ಕನುಗುಣವಾಗಿ 'ಪರಿಸರದಬಗ್ಗೆ ಕಾಳಜಿ' ಅಂಶಗಳನ್ನು ಕೇಂದ್ರಿಕರಿಸಲಾಗುತ್ತದೆ.

## ಚಟುವಟಿಕೆ 1 : ರಾಷ್ಟ್ರಧ್ವಜ ನಿರ್ಮಾಣ

ವಿಧಾನ :

- ರಾಷ್ಟ್ರದ್ವಜನಿರ್ಮಾಣಕ್ಕೆ ಅಗತ್ಯವಿರುವ ಕೇಸರಿ, ಬಿಳಿ ಮತ್ತು ಹಸಿರು ಬಣ್ಣಗಳ ಕಾಗದಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವುದು.
- ಫೆವಿಕಾಲ್ ಮುಂತಾದ ಅಗತ್ಯವಿರುವ ಮೂಲಭೂತ ಸಾಮಗ್ರಿಗಳನ್ನು ಕೂಡ ಒದಗಿಸುವುದು.
- ರಾಷ್ಟ್ರದ್ವಜನಿರ್ಮಾಣದಲ್ಲಿ ವಿದ್ಯಾರ್ಥಿಗಳಿಗೆ ನೆರವಾಗಿ.
- ರಾಷ್ಟದ್ವಜದ ಪ್ರಾಮುಖ್ಯತೆ ಮತ್ತು ಪ್ರತಿಯೊಂದುವರ್ಣದ ಸಂಕೇತವನ್ನು ವಿದ್ಯಾರ್ಥಿಗಳೊಂದಿಗೆ ಚರ್ಚಿಸಿ.

## ಚಟುವಟಿಕೆ 2 : ಭಾರತೀಯ ರಾಷ್ಟೀಯಚಿಹ್ನೆಗಳ ಬಗ್ಗೆ ತಿಳಿದುಕೊಳ್ಳುವುದು

ವಿಧಾನ : ಮೊದಲಿಗೆ ಭಾರತದ ಹಲವು ರಾಷ್ಟ್ರೀಯಚಿಹ್ನೆಗಳನ್ನು ಕುರಿತು ಚರ್ಚಿಸಿ :

ಭಾರತದ ರಾಷ್ಟ್ರೀಯ ಕುಸುಮ : ತಾವರೆ

ಭಾರತದ ರಾಷ್ಟ್ರಪಕ್ಷಿ : ನವಿಲು

ಭಾರತದ ರಾಷ್ಟ್ರಪ್ರಾಣಿ : ರಾಯಲ್ ಬಂಗಾಳ ಹುಲಿ

ಭಾರತದ ರಾಷ್ಟ್ರೀಯ ಮರ: ಆಲದಮರ

ಭಾರತದ ರಾಷ್ಟ್ರಫಲ : ಮಾವಿನಹಣ್ಣು

ಭಾರತದ ರಾಷ್ಟ್ರಲಾಂಛನ : ಅಶೋಕಸ್ತಂಭ

ಭಾರತದ ರಾಷ್ಟ್ರೀಯಧ್ಯೇಯವಾಕ್ಯ : 'ಸತ್ಯಮೇವಜಯತೆ'

ಭಾರತದ ರಾಷ್ಟ್ರಗೀತೆ : 'ಜನ ಗಣ ಮನ...'

ಭಾರತದ ನಾಡಗೀತೆ : ವಂದೆ ಮಾತರಂ

* ತಾವರೆಹೂವು, ನವಿಲು, ಆಲದಮರ ಹಾಗು ಮಾವಿನಹಣ್ಣುಗಳ ರೇಖಾಚಿತ್ರಗಳನ್ನು ಬಿಡಿಸಲು ಮಕ್ಕಳಿಗೆ ಹೇಳಿ.
* ಮಕ್ಕಳು ಶುದ್ಧ ಹಾಗೂ ಸ್ಪಷ್ಟ ಉಚ್ಚಾರಣೆಯೊಂದಿಗೆ ರಾಷ್ಟ್ರಗೀತೆ ಹಾಗು ನಾಡಗೀತೆಗಳನ್ನು ಹಾಡುವಂತೆ ಅಭ್ಯಾಸ ಮಾಡಲು ಅವರಿಗೆ ಸಹಾಯ ಮಾಡಿ.
* ರೇಖಾಚಿತ್ರ, ವರ್ಣಚಿತ್ರ, ನಾಟ್ಯ, ಗೀತೆ ಮುಂತಾದ ರಾಷ್ಟ್ರೀಯಚಿಹ್ನೆಗಳನ್ನು ತಮ್ಮದೇ ಆಯ್ಕೆಯ ಸೃಜನಾತ್ಮಕರೂಪದಲ್ಲಿ ಮೂಡಿಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸಿ.
* ಈ ಎಲ್ಲಾ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳಿಗೆ ನೆರವಾಗಿ.
* ವಿದ್ಯಾರ್ಥಿಗಳು ತಮ್ಮ ರಚನೆಗಳನ್ನು ಪ್ರಸ್ತುತಪಡಿಸಿದ ನಂತರ, ಆ ಪ್ರಸ್ತುತ ಚಿಹ್ನೆಯನ್ನೇ ಆಯ್ದುಕೊಂಡ ಕಾರಣದ ಬಗ್ಗೆ ಅವರೊಡನೆ ಚರ್ಚಿಸಿ.

## 6.2.1 ಶಕ್ತಿಯುತ ಹಾಗೂ ಆರೋಗ್ಯಕರ

ಆರೋಗ್ಯಕರಜೀವನಶೈಲಿ, ಪೌಷ್ಟಿಕಆಹಾರಸೇವನೆ ಮತ್ತು ದೈಹಿಕವಾಗಿ ಸಕ್ರಿಯರಾಗಿರುವುದು ಮಕ್ಕಳಲ್ಲಿ ಸದೃಢಕಾಯ, ಆರೋಗ್ಯಕರಬೆಳವಣಿಗೆ ಮತ್ತು ಶಾಲೆಯಲ್ಲಿ ಏಕಾಗ್ರತೆಯನ್ನು ಕಾಪಾಡಿಕೊಳ್ಳಲು ಸಹಾಯಮಾಡುತ್ತದೆ.

ಉದ್ದೇಶ :

ಮಕ್ಕಳು ಅರ್ಥೈಸಿಕೊಂಡು ವಿವರಿಸಲು ಶಕ್ತರಾಗುವರು :

- ಉತ್ತಮ ವೈಯಕ್ತಿಕನೈರ್ಮಲ್ಯವನ್ನು ಹೊಂದುವುದು ಏಕೆ ಮುಖ್ಯ?
- ಉತ್ತಮ ವೈಯಕ್ತಿಕನೈರ್ಮಲ್ಯವನ್ನು ಪಡೆಯುವುದು ಹೇಗೆ ? ಅವಶ್ಯಕ ಅಂಶಗಳ ಪಟ್ಟಿಯೊಂದಿಗೆ ಚರ್ಚಿಸಿ.

ವಿಧಾನ : ಕಥಾನಿರೂಪಣೆಯೊಂದಿಗೆ ಚರ್ಚೆ, ಆಟಗಳು

ಸಮಯ : 40 ನಿಮಿಷಗಳು

### ಚಟುವಟಿಕೆ 1 : ಕಥಾನಿರೂಪಣೆ : ನಿಮ್ಮಿ ಆಹಾರದಬಗ್ಗೆ ಕಾಳಜಿ

ಪ್ರತಿದಿನ ಸಾಯಂಕಾಲ ನಿಮ್ಮಿ ಮತ್ತು ಅವಳ ಗೆಳತಿಯರು ಉದ್ಯಾನವನದಲ್ಲಿ ಆಟವಾಡಲು ಹೋಗುತ್ತಿದ್ದರು. ಕಣ್ಣುಮುಚ್ಚಾಲೆಯಾಟ, ಹಗ್ಗದಾಟಗಳಂತಹ ಹಲವಾರು ಆಟಗಳನ್ನು ಅವರು ಆಡುತ್ತಿದ್ದರು. ಪ್ರತಿದಿನಸಂಜೆ ಆಡಿ ದಣಿದುಬಂದ ಮಗಳು ತಿನ್ನಲು ಏನಾದರು ಬೇಕೆಂದು ಕೇಳಿದಾಗ, ಅವಳ ತಾಯಿಯು ಮೊದಲು ಸಾಬೂನಿನಿಂದ ಕೈ, ಕಾಲು ಮತ್ತು ಮುಖವನ್ನು ಸ್ವಚ್ಛಗೊಳಿಸುವಂತೆ ನಿಮ್ಮಿಗೆ ಸೂಚಿಸುತ್ತಿದ್ದರು. ಒಮ್ಮೆ ಅನಾರೋಗ್ಯನಿಮಿತ್ತ ನಿಮ್ಮಿಯ ತಾಯಿಯು ಮಗಳಿಗೋಸ್ಕರ ಮೇಜಿನಮೇಲೆ ಬಿಸ್ಕತ್ತು ಮತ್ತು ಸೇಬಿನಹಣ್ಣುಗಳನ್ನು ಇಟ್ಟು ತಾವು ಒಳಕೋಣೆಯಲ್ಲಿ ವಿಶ್ರಮಿಸುತ್ತಿದ್ದರು. ಆಟವಾಡಿ ಮನೆಗೆಮರಳಿದ ನಿಮ್ಮಿಗೆ ಮೇಜಿನಮೇಲೆ ತಿನಿಸುಗಳನ್ನು ಇಟ್ಟಿರುವುದಾಗಿ ಅವಳತಾಯಿಯು ಕೋಣೆಯಿಂದ ಕೂಗಿ ಹೇಳಿದರು. ಕೈಕಾಲು, ಮುಖ ಸ್ವಚ್ಛಗೊಳಿಸುವಂತೆ ಪ್ರತಿದಿನವೂ ಸೂಚಿಸುವ ಅಮ್ಮನು ಅಂದು ಅಲ್ಲಿರಲಿಲ್ಲವಾಗಿ, ಕೈಸ್ವಚ್ಛಗೊಳಿಸದೆಯೇ ನೇರವಾಗಿ ಮೇಜಿನಬಳಿ ಬಂದ ನಿಮ್ಮಿಯು ಹಣ್ಣು ಮತ್ತು ಬಿಸ್ಕತ್ತುಗಳನ್ನು ತಿನ್ನಲು ಆರಂಭಿಸಿದಳು. ಸೇಬಿನಹಣ್ಣು ತಿಂದಾಗ, ಅವಳು ಕಚ್ಚಿದಬಾಗದಲ್ಲಿ ಸಿಪ್ಪೆಇಲ್ಲವಾಗಿ ಆ ಭಾಗವೆಲ್ಲಾ ಅವಳ ಕೈಧೂಳಿನಿಂದ ಮಲಿನವಾಗುತ್ತಿದ್ದುದನ್ನು ಆಗ ಅವಳು ಗಮನಿಸಿದಳು.

ಉದ್ಯಾನವನದಲ್ಲಿ ಆಟವಾಡುವಾಗ, ಹಲವುವಸ್ತುಗಳ ಸಂಪರ್ಕದಿಂದ ಕೈಗೆ ಧೂಳು ಹಾಗೂ ಕೀಟಾಣುಗಳು ಅಂಟಿಕೊಳ್ಳುವುದರಿಂದ, ಆಹಾರ ಸೇವನೆಗೆ ಮುನ್ನ ಕೈಕಾಲು ಸ್ವಚ್ಛಗೊಳಿಸುವುದು ಬಹಳ ಮುಖ್ಯವೆಂದು ಅಂದು ಅವಳು ಅರಿತಳು. ಇನ್ನುಮುಂದೆ ಹೊರಗಿನಿಂದ ಮನೆಗೆಬಂದ ಕೂಡಲೇ ತಾಯಿಯ ಸೂಚನೆಯಂತೆ ಮೊದಲು ಕೈಕಾಲು, ಮತ್ತು ಮುಖವನ್ನು ಸ್ವಚ್ಛಗೊಳಿಸಿ ನಂತರ ಆಹಾರಸೇವಿಸುವನೆಂದು ತನ್ನಲ್ಲಿಯೇ ಪ್ರತಿಜ್ಞೆಯನ್ನು ಮಾಡಿಕೊಂಡಳು.

ಪ್ರಶ್ನೋತ್ತರ :

- ಪ್ರತಿಸಾಯಂಕಾಲ ನಿಮ್ಮಿಯು ಆಟವಾಡಲು ಎಲ್ಲಿಗೆ ಹೋಗುತ್ತಾಳೆ ?
- ಆಟವಾಡಿ ಮನೆಗೆಮರಳಿದ ಮಗಳಿಗೆ ತಾಯಿಯು ಏನನ್ನು ಹೇಳುವರು ?
- ನಿಮ್ಮಿಗೆ ತಿನಿಸುಗಳನ್ನು ಕೊಡಲು ಒಂದುದಿನ ತಾಯಿಗೆ ಏಕೆ ಸಾಧ್ಯವಾಗಲಿಲ್ಲ ?
- ಹಣ್ಣುತಿನ್ನುವಾಗ ನಿಮ್ಮಿಯು ಏನನ್ನು ಗಮನಿಸಿದಳು ? ಮತ್ತು ಏಕೆ ?

## ಚಟುವಟಿಕೆ 2 : ನೈರ್ಮಲ್ಯಕುರಿತಂತೆ ಮೂಕಾಭಿನಯ

ಮೂಕಾಭಿನಯದಮೂಲಕ ನೈರ್ಮಲ್ಯದ ಪ್ರಾಮುಖ್ಯತೆಯನ್ನು ಮಕ್ಕಳು ಅರ್ಥಮಾಡಿಕೊಳ್ಳಲು ಸಹಾಯಮಾಡಿ. ಕೆಲವು ಸಾಮಾನ್ಯ ಸ್ವಚ್ಛತಾಕ್ರಿಯೆಗಳಾದ ಹಲ್ಲುಜ್ಜುವುದು, ಕೆಮ್ಮುವಾಗಬಾಯಿಗೆ ಕರವಸ್ತ್ರ ಅಡ್ಡಹಿಡಿಯುವುದು, ಪ್ರತಿದಿನ ಸ್ನಾನಮಾಡುವುದು ಮುಂತಾದ ಸ್ವಚ್ಛತಾಕ್ರಿಯೆಗಳ ಪಟ್ಟಿಯಿಂದ ಒಂದು ಮಗು ಒಂದು ಚೀಟಿಯನ್ನು ಆರಿಸಿಕೊಳ್ಳಬೇಕು. ನಂತರ ಆ ಮಗುವು ಏನನ್ನೂ ಮಾತನಾಡದೆ ಕೇವಲ ಮೂಕಾಭಿನಯದ ಮೂಲಕ ಆ ಕ್ರಿಯೆಯನ್ನು ಅಭಿನಯಿಸಬೇಕು. ಇನ್ನಿತರ ಮಕ್ಕಳು ಆ ಪಾತ್ರಕ್ರಿಯೆಯನ್ನು ಊಹಿಸಬೇಕು. ನಂತರ ನೀವು ಸ್ವಚ್ಛತೆಯ ಸರಿಯಾದಮಾರ್ಗಗಳ ಕುರಿತು ಮಕ್ಕಳಿಗೆ ವಿವರಿಸಿ.

## ಚಟುವಟಿಕೆ 3 : ಆರೋಗ್ಯಕರ / ಅನಾರೋಗ್ಯಕರ

ಅವಶ್ಯಕ ಸಾಮಗ್ರಿಗಳು : ಆರೋಗ್ಯಕರ / ಅನಾರೋಗ್ಯಕರ ಚಟುವಟಿಕೆಗಳ ಪಟ್ಟಿ

ನಿರ್ವಹಣೆ : ಪ್ರತಿಯೊಂದು ವಾಕ್ಯವನ್ನು ಒಂದೊಂದಾಗಿ ಓದಿ. ಸರಿಯಾದ ಉತ್ತರಕ್ಕಾಗಿ ಕೈಹೆಬ್ಬೆಟ್ಟನ್ನು ಮೇಲ್ಮುಖವಾಗಿ ಮತ್ತು ತಪ್ಪುಉತ್ತರಕ್ಕಾಗಿ ಕೈಹೆಬ್ಬೆಟ್ಟನ್ನು ಕೆಳಮುಖವಾಗಿ ಸೂಚಿಸುವಂತೆ ವಿದ್ಯಾರ್ಥಿಗಳಿಗೆ ನಿರ್ದೇಶಿಸಿ.

ಒದಗಿಸಿರುವ ಮಾಹಿತಿಯ ಮೇರೆಗೆ ಯಾವುದೇ ತಪ್ಪಾದ ಪ್ರತಿಕ್ರಿಯೆಗಳನ್ನು ಸ್ಪಷ್ಟಪಡಿಸಿ.

ಆರೋಗ್ಯಕರ (✓) ಮತ್ತು ಅನಾರೋಗ್ಯಕರ (✗) ಚಟುವಟಿಕೆಗಳ ಪಟ್ಟಿ :

- ಹಣ್ಣು ಮತ್ತು ತರಕಾರಿಗಳನ್ನು ಯಥೇಚ್ಚವಾಗಿ ಸೇವಿಸುವುದು. – (✓)
- ನಿಮ್ಮ ಮನಸ್ಥಿತಿ ಸರಿಯಿಲ್ಲದಾಗ ಪೋಷಕರೆದುರು ಕೂಗಾಡುವುದು. – (✗)
- ಪ್ರತಿನಿತ್ಯ ೮–೧೦ ಗಂಟೆಗಳಕಾಲ ನಿದ್ರಿಸುವುದು. – (✓)
- ಕೇವಲ ಮುಂಜಾನೆಮಾತ್ರ ಹಲ್ಲುಜುವುದು. – (✗)
- ಆಹಾರಸೇವನೆಗೆ ಮುನ್ನ, ನಂತರ ಮತ್ತು ಶೌಚಾಲಯದ ಬಳಕೆಯನಂತರ ಸಾಬೂನಿನಿಂದ ಕೈತೊಳೆಯುವುದು. – (✓)
- ಪ್ರತಿದಿನ ಸ್ನಾನಮಾಡುವುದು. – (✓)
- ವ್ಯಾಯಾಮದನಂತರ ದುರ್ನಾತನಾಷಕದ ಬಳಕೆ. – (✓)
- ಪ್ರತಿದಿನ ತಪ್ಪದೆ ವ್ಯಾಯಾಮಮಾಡುವುದು. – (✓)
- ಕೈಕಾಲುಗಳ ಉಗುರುಗಳನ್ನು ನಿಯಮಿತವಾಗಿ ಕತ್ತರಿಸುವುದು. – (✓)
- ಕೇವಲ ಬರೀ ನೀರಿನಿಂದ ಕೈತೊಳೆಯುವುದು. – (✗)
- ಕೆಮ್ಮುವುದು ಅಥವಾ ಸೀನುವಾಗ ಮೂಗು ಮತ್ತು ಬಾಯಿಗಳಿಗೆ ಅಡ್ಡವಾಗಿ ಕರವಸ್ತ್ರಹಿಡಿಯುವುದು. – (✓)

## 6.2.2 ಪರಿಶುದ್ಧತೆ

ಪರಿಶುದ್ಧತೆಯೆಂದರೆ ಕೊಳೆ, ಧೂಳು, ಕಲೆ ಹಾಗೂ ದುರ್ನಾತವಿಲ್ಲದಿರುವುದು. ಸ್ವಚ್ಛತೆಯ ಪರಿಭಾಷೆಯು ಆರೋಗ್ಯ, ಸೌಂದರ್ಯ, ಸುವಾಸನೆ ಮತ್ತು ಧೂಳು ಹಾಗು ಕೀಟಾಣುಗಳು ತಮಗೂ ಮತ್ತು ಇತರರಿಗೂ ಹರಡದಂತೆ ಎಚ್ಚರವಹಿಸುವುದು.

ನಮ್ಮೆಲ್ಲರ ಆರೋಗ್ಯಕ್ಕಾಗಿ ಶುದ್ಧಪರಿಸರವನ್ನು ಕಾಪಾಡಿಕೊಳ್ಳುವುದು ಅತ್ಯವಶ್ಯಕ. ಏಕೆಂದರೆ ನಮ್ಮ ಆರೋಗ್ಯವು ನಾವು ವಾಸಿಸುವ ಪರಿಸರವನ್ನವಲಂಬಿಸಿದೆ. ಜನರ ಆರೋಗ್ಯನಾಶಕ್ಕೆ ಸುತ್ತಮುತ್ತಲಿನ ಅಶುದ್ಧಪರಿಸರವೇ ಕಾರಣ. ಧೂಳು ಮತ್ತು ಖಾಯಿಲೆ ಎಂದಿಗೂ ಜೊತೆ.

ಉದ್ದೇಶಗಳು :

ಮಕ್ಕಳು ತಿಳಿಯಬಹುದಾದ ಅಂಶಗಳು ;

- ಪರಿಸರಸಂರಕ್ಷಣೆಯ ವಿಧಾನಗಳು.
- ಸ್ವಚ್ಛತೆಯ ಪ್ರಾಮುಖ್ಯತೆ.

ವಿಧಾನಗಳು : ಸ್ವಚ್ಛತಾಆಂದೋಲನ – ಜನಜಾಗೃತಿ ಮತ್ತು ಚರ್ಚೆಗಳು, ಕವನವಾಚನ

ಸಮಯ : 90 ನಿಮಿಷಗಳು

- ಸ್ವಚ್ಛತಾಆಂದೋಲನವನ್ನು ಏರ್ಪಡಿಸುವುದು. ( ಚಟುವಟಿಕೆಗಳ ಮಾರ್ಗವಾಗಿ )

    ೧. ಸ್ವಚ್ಛತೆಯನ್ನು ಕುರಿತಂತೆ ಶಾಲೆಯಲ್ಲಿ ಆಂದೋಲನವನ್ನು ಸಂಘಟಿಸುವುದು.

    ೨. ಇಂತಹ ಆಂದೋಲನಗಳ ಸಮಯದಲ್ಲಿ, ಶಾಲೆಯ ಸುತ್ತಮುತ್ತ ಹರಡಿರುವ ಕಸ-ಕಡ್ಡಿಗಳನ್ನು ಆರಿಸುವುದು, ಸದಾ ಸ್ವಚ್ಛವಾಗಿರಬೇಕಾದ ತರಗತಿಯ ಒಳಗೂ ಹಾಗು ಹೊರಗೂ ದಿನಚರಿಯಭಾಗವಾಗಿ ಸದಾ ಸ್ವಚ್ಛವಾಗಿಡುವುದು, ಶಾಲಾಕ್ಯಾಂಟೀನ್, ಆಟದಮೈದಾನ ಹಾಗೂ ಮಕ್ಕಳು ಉಪಯೋಗಿಸುವ ಜಾಗಗಳನ್ನು ಸದಾ ಸ್ವಚ್ಛವಾಗಿರಿಸುವಂತಹ ವಿವಿಧ ಕಾರ್ಯಗಳಲ್ಲಿ ಮಕ್ಕಳನ್ನು ತೊಡಗಿಸುವುದು.

- ಅನಾರೋಗ್ಯಕರಜೀವನಶೈಲಿಯ ದುಷ್ಪರಿಣಾಮಗಳನ್ನು ಕುರಿತು ಜಾಗೃತಿಯನ್ನು ಸೃಷ್ಟಿಸುವುದು ( ಸ್ವಚ್ಛತಾಪ್ರಜ್ಞೆಯ ಮೂಲಕ )

1. ಅನಾರೋಗ್ಯಕರ ಜೀವನಶೈಲಿಯಿಂದುಂಟಾಗುವ ದುಷ್ಪರಿಣಾಮಗಳನ್ನು ವಿದ್ಯಾರ್ಥಿಗಳಿಗೆ ನಿದರ್ಶನಗಳ ಮೂಲಕ ತೋರ್ಪಡಿಸಿ.
2. ಅನಾರೋಗ್ಯಕರಜೀವನಶೈಲಿಯ ದುಷ್ಪರಿಣಾಮಗಳ ಸುದ್ದಿಗಳನ್ನು ತರಗತಿಯ ಸೂಚನಾಫಲಕದಲ್ಲಿ ಪ್ರತಿವಿದ್ಯಾರ್ಥಿಯು ಹಾಕುವ ಕಾರ್ಯವನ್ನು ನಿಯೋಜಿಸುವುದರ ಮೂಲಕ ಇನ್ನೂ ಹೆಚ್ಚಿನ ಜಾಗೃತಿಯನ್ನು ಮೂಡಿಸಿ. ಇಂತಹ ಸೂಚನಾಫಲಕಗಳನ್ನು ಆಗಾಗ್ಗೆ ಓದುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ.
3. ದೈನಂದಿನಜೀವನದಲ್ಲಿ ಸ್ವಚ್ಛತೆಯ ಅಭ್ಯಾಸವನ್ನು ಹೇಗೆ ಬೆಳೆಸಿಕೊಳ್ಳಬೇಕು ಎಂಬುದರ ಕುರಿತು ತಮ್ಮ ಅನಿಸಿಕೆ/ಆಲೋಚನೆಗಳನ್ನು ಹಂಚಿಕೊಳ್ಳಲು ಅವಕಾಶ ನೀಡಿ.

ತರಗತಿಯಲ್ಲಿ ಪಾಲಿಸಬೇಕಾದ ನಿಯಮಗಳು :

- ನೆಲದಮೇಲೆ ಬಿದ್ದಿರುವ ಕಸಕಡ್ಡಿಗಳನ್ನು ಆರಿಸಿ ತೆಗೆದುಹಾಕುವುದು.
- ಶಾಲಾವಧಿಮುಗಿದ ನಂತರ ಫಲಕವನ್ನು ಸ್ವಚ್ಛಗೊಳಿಸಲು ಸಹಕರಿಸಿ.
- ತರಗತಿಯಲ್ಲಿನ ಮೇಜು ಮತ್ತು ಕುರ್ಚಿಗಳನ್ನು ಅಂದವಾಗಿ ಹಾಗು ಒಪ್ಪವಾಗಿ ಜೋಡಿಸುವುದು.
- ತರಗತಿಯ ಮೇಜುಗಳಮೇಲೆ ಯಾವುದೇ ಪುಸ್ತಕಗಳನ್ನು ಬಿಟ್ಟುಹೋಗದಂತೆ ಖಾತ್ರಿಪಡಿಸಿಕೊಳ್ಳಿ.
- ಮೇಜು ಮತ್ತು ಕುರ್ಚಿಗಳ ಮೇಲೆ ಏನನ್ನೂ ಕೂಡ ಬರೆಯದಂತೆ ಎಚ್ಚರವಹಿಸಿ.
- ಶೌಚಾಲಯಬಳಕೆಯ ನಂತರ ಅದನ್ನು ನೀರಿನಿಂದ ಶುದ್ಧಗೊಳಿಸುವುದು.
- ಕಡಿಮೆ ನೀರಿನಬಳಕೆ, ನೀರಿನಮರುಬಳಕೆ ಮತ್ತು ವಿದ್ಯುದ್ದೀಪಗಳನ್ನು ಆಫ್ ಮಾಡುವುದರ ಮೂಲಕ ಭೂಸಂಪನ್ಮೂಲ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸಿ.
- ತಮ್ಮ ಪುಸ್ತಕಗಳು, ನೋಟುಪುಸ್ತಕಗಳು ಹಾಗು ಬರವಣಿಗೆಯ ಸಾಮಾಗ್ರಿಗಳನ್ನು ಜೋಪಾನವಾಗಿ ಮತ್ತು ಒಪ್ಪವಾಗಿ ಇಡುವುದು.

- ಪ್ರತಿದಿನವೂ ಶಾಲಾಸಮವಸ್ತ್ರಗಳು, ಶಾಲಾಚೀಲಗಳು ಮತ್ತು ಊಟದಡಬ್ಬಿಗಳನ್ನು ಒಪ್ಪವಾಗಿ ಮತ್ತು ಕ್ರಮಬದ್ಧವಾಗಿ ಜೋಡಿಸುವುದು. ಯಾವ ವಿದ್ಯಾರ್ಥಿಯ ಚೀಲವು ಶುದ್ಧವಾಗಿ, ಸುಂದರವಾಗಿದೆ ಎಂಬುದರ ಬಗ್ಗೆ ಸ್ಪರ್ಧೆಯನ್ನು ಕೂಡ ಏರ್ಪಡಿಸಬಹುದು.

## ಕವನ : ಮತ್ತೊಮ್ಮೆ, ಮಗದೊಮ್ಮೆ

(ರಚನೆ : ಪಾರುಲ್ ದಾವರ್)

ಟಿಕ್ ಟಾಕ್ ಗೆಳೆಯರೆ ಇಲ್ಲಿ ಕೇಳಿ
ನಿಮ್ಮ ಕೈಗಳನ್ನು ತೊಳೆಯಿರಿ ತೊಳೆಯಿರಿ
ಪ್ರಾಣಿಗಳನ್ನು ಮುಟ್ಟಿದಾಗಲೊಮ್ಮೆ,
ಶೌಚಾಲಯ ಬಳಸಿದಾಗ ಮತ್ತೊಮ್ಮೆ,
ಆಹಾರ ಸೇವನೆಯನಂತರ ಮಗದೊಮ್ಮೆ,
ಮೂಗು ಮುಟ್ಟಿದಾಗ ಇನ್ನೊಮ್ಮೆ

ಟಿಕ್ ಟಿಕ್ ದನಿಗೆ ನಿದ್ದೆಯಿಂದ ಏಳಿ
ಹಲ್ಲುಗಳ ಫಳಫಳ ಉಜ್ಜಿ ಉಜ್ಜಿ ಉಜ್ಜೀಳಿ
ಮುಂಜಾನೆ ಎದ್ದಾಗಲೊಮ್ಮೆ,
ರಾತ್ರಿ ಮಲಗುವಮುನ್ನ ಮತ್ತೊಮ್ಮೆ,
ಫಳಫಳ ಹೊಳೆಯುವ ಹಲ್ಲಿಗಾಗಿ ಮಗದೊಮ್ಮೆ,
ಕೀಟಾಣುಗಳೊಂದಿಗೆ ಹೋರಾಡಲು ಇನ್ನೊಮ್ಮೆ
ಶುಭೋದಯ ನಿನಗೆ ಓ ದಿನವೇ,
ಮಿಂದು ಮೀಯಬೇಕು ದಿನದಿನವು,
ಬೆವರ ತೊಳೆಯಲೊಮ್ಮೆ,
ತಾಜವಾಗಿ ಹಗುರವಾಗಿರಲು ಮತ್ತೊಮ್ಮೆ,
ಶುಚಿತ್ವಕ್ಕಾಗಿ ಮಗದೊಮ್ಮೆ,
ದೈವಶಕ್ತಿಯೊಡನೆ ಕೂಡಿರಲಿ ಸದಾ ಸ್ವಚ್ಛಾತಾಶಕ್ತಿ.

## 6.2.3 ಪ್ರಕೃತಿಯ ಕುರಿತು ಕಾಳಜಿ

ನಾವು ಜೀವಿಸುತ್ತಿರುವ ಈ ಭೂಮಿಯು ಬಹು ಸುಂದರವಾಗಿದ್ದು ಶುದ್ಧವಾದ, ಆಕರ್ಷಕವಾದ ಹಾಗು ಹಸಿರಿನಿಂದ ಸಮೃದ್ಧವಾದ ಪ್ರಕೃತಿಯನ್ನು ಹೊಂದಿದೆ. ಪ್ರಕೃತಿಯು ನಮ್ಮ ಆಪ್ತ ಗೆಳೆಯನಾಗಿದ್ದು ನಮಗೆ ಅಗತ್ಯವಿರುವ ಎಲ್ಲಾ ಸಂಪನ್ಮೂಲಗಳನ್ನು ಒದಗಿಸುತ್ತಿದೆ. ನಮ್ಮ ಉತ್ತಮಜೀವನಕ್ಕಾಗಿ ಕುಡಿಯಲು ಶುದ್ಧವಾದ ನೀರು, ಉಸಿರಾಡಲು ಶುದ್ಧಗಾಳಿ, ಆಹಾರ, ವಸತಿ, ಪ್ರಾಣಿಪಕ್ಷಿಸಂಕುಲಗಳು, ಗಿಡಮರಗಳ ಸಮೃದ್ಧತೆ ಮುಂತಾದುವುಗಳನ್ನು ನಿಸರ್ಗವು ನಮಗೆ ಒದಗಿಸಿದೆ. ಪರಿಸರಸಮತೋಲನಕ್ಕೆ ಕಿಂಚಿತ್ತೂ ಕುಂದುಬಾರದಂತೆ ನಮ್ಮ ನಿಸರ್ಗಸಮೃದ್ಧತೆಯನ್ನು ನಾವು ಅನುಭವಿಸಿ ಆನಂದಿಸಬೇಕು. ನಮ್ಮ ಪರಿಸರವನ್ನು ಉಳಿಸಿ, ಬೆಳೆಸಿ, ಶುದ್ಧವಾಗಿರಿಸಿ ಅದು ನಶಿಸಿಹೋಗದಂತೆ ಅದರ ಬಗ್ಗೆ ಕಾಳಜಿವಹಿಸಿದರೆ ನಮ್ಮ ಪ್ರಕೃತಿಸೌಂದರ್ಯವನ್ನು ನಾವು ಚಿರಂತರ ಆಸ್ವಾದಿಸಬಹುದು.

ಉದ್ದೇಶ :

- ಪ್ರಕೃತಿಯ ಬಗ್ಗೆ ಜವಾಬ್ದಾರಿಯುತ ಮನೋಭಾವವನ್ನು ಬೆಳೆಸುವುದು.
- ವಿದ್ಯಾರ್ಥಿಗಳು ಪ್ರಕೃತಿಯನ್ನು ಕಾಪಾಡಬಹುದಾದ ವಿವಿಧ ವಿಧಾನಗಳನ್ನು ಅನ್ವೇಷಿಸುವುದು.

ವಿಧಾನ : ಕಥಾನಿರೂಪಣೆ ಮತ್ತು ಚರ್ಚೆ

ಸಮಯ : 40 ನಿಮಿಷಗಳು

### ಚಟುವಟಿಕೆ 1 : ಕತೆ : ಪ್ರಕೃತಿಯನ್ನು ಗೌರವಿಸುವುದು

ಒಮ್ಮೆ ಮಕ್ಕಳೆಲ್ಲರು ಉದ್ಯಾನವನದಲ್ಲಿ ಮಧ್ಯಾಹ್ನ ಕಳೆಯಲು ಹೊರಟಿದ್ದರು. "ಮಕ್ಕಳೆ ನಾವು ನಿಸರ್ಗದ ಬಗ್ಗೆ ಮಾತನಾಡಿರುವುದನ್ನು ನೆನಪಿಡಿ. ಪ್ರಕೃತಿಯ ಬಗ್ಗೆ ಗೌರವವಿರಲಿ ! " ಶಿಕ್ಷಕರು ಎಚ್ಚರಿಸಿದರು.

ಊಟವಾದನಂತರ, ಮಕ್ಕಳು ಎಲ್ಲಾ ಕಡೆ ಕಸಗಳನ್ನು ಬಿಸಾಡಿದರು. ಒಬ್ಬರಮೇಲೊಬ್ಬರು ವಸ್ತುಗಳನ್ನು ಎಸೆಯುತ್ತಾ ಆಟವಾಡಿದರು. ಗಿಡಮರಗಳ

ನಡುವೆ ಜೋರಾಗಿ ಶಬ್ದಮಾಡುತ್ತಾ ಓಡಾಡತೊಡಗಿದರು. ಆ ಸಮಯದಲ್ಲಿ ಒಂದು ಮಗುವು ಏನೋ ವಿಶೇಷವಾದದ್ದನ್ನು ಕಂಡು ಕೂಗಿತು. " ಇಲ್ಲಿ ನೋಡಿ ಎಲ್ಲರೂ ! ಪಕ್ಷಿಯೊಂದು ತನ್ನ ಪುಟ್ಟಮರಿಗಳಿಗೆ ಉಣಿಸುತ್ತಿದೆ !" ಅಚ್ಚರಿಯಿಂದ ಹೇಳಿದನು ರಾಜು. "ಶ್! ಹಕ್ಕಿಯನ್ನು ಹೆದರಿಸುವುದು ಸರಿಯಲ್ಲ" ಹೇಳಿದಳು ನೋನಿ. "ಪ್ರಕೃತಿಯನ್ನು ಗೌರವಭಾವದಿಂದ ಕಾಣಬೇಕು" ಎಂದಳು. ಎಲ್ಲರೂ ಸೇರಿ ತಾವು ಊಟದಸಮಯದಲ್ಲಿ ಅಲ್ಲೆಲ್ಲಾ ಹರಡಿದ್ದ ಕಸವನ್ನೆಲ್ಲಾ ಆಯ್ದು ತೆಗೆದರು.

"ಪ್ರಕೃತಿಯು ಬಹಳ ವಿಶೇಷವಾದದ್ದೆಂದು ಇಂದು ನಾವು ತಿಳಿದೆವು" ಹೇಳಿದಳು ನೋನಿ. ಮೆಚ್ಚುಗೆಯಿಂದ ನಗುಬೀರುತ್ತಾ ಶಿಕ್ಷಕರು "ನಮಗೆ ನಿರಂತರ ಆನಂದ ಹರ್ಷಗಳನ್ನು ಕೊಡುವ ನಿಸರ್ಗಮಾತೆಯನ್ನು ನಾವು ಸದಾ ಗೌರವಿಸಬೇಕು" ಹೇಳಿದರು.

ಪ್ರಶ್ನೋತ್ತರಗಳು :

- ಪ್ರಕೃತಿಯ ಬಗ್ಗೆ ನಿಮಗೆ ಏನು ಮೆಚ್ಚುಗೆಯಾಗುತ್ತದೆ ?
- ಪಟ್ಟಣದಲ್ಲಿ ವಾಸಿಸುವ ನೀವು ಪ್ರಕೃತಿಯನ್ನು ಯಾವರೀತಿ ಪ್ರೀತಿಸುವಿರಿ ?
- ನಾವು ಯಾವರೀತಿ ಪ್ರಕೃತಿಗೆ ಹಾನಿಯನ್ನುಂಟುಮಾಡುತ್ತೀವಿ ?

## ಚಟುವಟಿಕೆ 2 : ರೇಖಾಚಿತ್ರರಚನೆ

ಆ ಪ್ರಸ್ತುತ ಒಂದುವಾರದಲ್ಲಿ ಗಮನಿಸಿದ ಪ್ರಕೃತಿಗೆ ಸಂಬಂಧಪಟ್ಟ ಐದು ಅಂಶಗಳನ್ನು ಚಿತ್ರಿಸಿ.

## 6.3 ಅಶೋಕಚಕ್ರ



- ಅಶೋಕಚಕ್ರವು 24 ಕಡ್ಡಿಗಳನ್ನೊಳಗೊಂಡ 'ಧರ್ಮಚಕ್ರ'ದ ರೂಪ.
- ನಮ್ಮ ರಾಷ್ಟ್ರಧ್ವಜದ ನಡುವಿನ ಬಿಳಿವರ್ಣದ ಹಿನ್ನಲೆಯಲ್ಲಿ ನಟ್ಟನಡುವೆ ದಟ್ಟನೀಲಿ ಬಣ್ಣದ ಅಶೋಕಚಕ್ರವನ್ನು ಕಾಣಬಹುದು.
- ಅಶೋಕಚಕ್ರವನ್ನು 'ಕರ್ಮಚಕ್ರ'ವೆಂತಲೂ ಕರೆಯುತ್ತಾರೆ.
- ಈ ಚಕ್ರದಲ್ಲಿನ 24 ಕಡ್ಡಿಗಳು ಮಾನವನ 24 ಗುಣಗಳನ್ನು ಪ್ರತಿನಿಧಿಸುತ್ತದೆ.
- ಅಶೋಕಚಕ್ರದಲ್ಲಿನ 24 ಕಡ್ಡಿಗಳು ದಣಿವುಗೊಳ್ಳದೆ 24 ಗಂಟೆಗಳು ತಮ್ಮ ಕರ್ತವ್ಯವನ್ನು ನಿರ್ವಹಿಸುವಂತೆ ಪ್ರತಿಯೊಬ್ಬ ಭಾರತೀಯನನ್ನೂ ಪ್ರೇರೇಪಿಸುತ್ತದೆ.
- ಅಶೋಕಚಕ್ರದಲ್ಲಿ ಸೂಚಿತವಾಗಿರುವ ಎಲ್ಲ ಮಾರ್ಗಗಳು ದೇಶವನ್ನು ಪ್ರಗತಿಪಥದೆಡೆಗೆ ಒಯ್ಯುತ್ತವೆ.

ಅಶೋಕಚಕ್ರದಲ್ಲಿ 24 ಮೌಲ್ಯಗಳು ಅಂತರ್ಗತವಾಗಿದ್ದು ಈ ಹಂತದಲ್ಲಿ ನಾವು ಕೆಲವು ನಿರ್ದಿಷ್ಟಮೌಲ್ಯಗಳಾದ ಪ್ರೀತಿ, ಕರುಣೆ, ಸಹನೆ, ಸಮಯಪ್ರಜ್ಞೆ ಮತ್ತು ಏಕತೆಗಳನ್ನು ಮಾತ್ರ ಪರಿಗಣಿಸಿರುತ್ತೇವೆ.

## 6.3.1 ಸಾಮ್ರಾಟ ಅಶೋಕ

ಸಾಮ್ರಾಟ ಅಶೋಕನು ಮೌರ್ಯವಂಶದ ಸುಪ್ರಸಿದ್ಧ ದೊರೆ. ಅವನ ಸಾಮ್ರಾಜ್ಯವು ಪಶ್ಚಿಮದಲ್ಲಿ ಪಾಕಿಸ್ಥಾನ ಹಾಗು ಆಫ್ಘಾನಿಸ್ಥಾನ, ಪೂರ್ವದಲ್ಲಿ ಬಾಂಗ್ಲಾದೇಶ ಮತ್ತು ಅಸ್ಸಾಂ, ಹಾಗೂ ದಕ್ಷಿಣದಲ್ಲಿ ಆಂಧ್ರಪ್ರದೇಶ ಮತ್ತು ಕೇರಳದವರೆಗೂ ಹಬ್ಬಿತ್ತು. ಮಗಧ ರಾಜ್ಯದ ಪಾಟಲಿಪುತ್ರ ( ಇಂದಿನ ಬಿಹಾರದ ಪಾಟ್ನಾ ) ಅಶೋಕನ ರಾಜಧಾನಿಯಾಗಿತ್ತು.

ಹರೆಯದಲ್ಲಿ ಅಶೋಕನು ಬಹಳ ಕೋಪಿಷ್ಟನೂ, ದುಷ್ಟನೂ ಮತ್ತು ಬಹಳ ಕ್ರೂರಿಯಾಗಿದ್ದನು. ಆದರೆ ಅಂತಹ ಕ್ರೂರಿಯನ್ನು ಕಳಿಂಗ ಯುದ್ಧವು ಸಂಪೂರ್ಣವಾಗಿ ಮಾರ್ಪಡಿಸಿತು. ಅತಿಘೋರವಾಗಿ ನಡೆದ ಯುದ್ಧದಲ್ಲಿ ಎರಡೂಕಡೆಯ ಲಕ್ಷಾಂತರ ಸೈನಿಕರು ಭೀಷಣವಾಗಿ ಕಾದಾಡಿ ಸಾವನ್ನಪ್ಪಿದರು. ಯುದ್ಧದ ಘೋರಪರಿಣಾಮವನ್ನು ಕಂಡು ಸಮರದಲ್ಲಿ ಜಯಗಳಿಸಿದ ಆಶೋಕನ ಮನಸ್ಸು ಪಶ್ಚಾತ್ತಾಪದಿಂದ ಕುಗ್ಗಿತು. ಅವನ ರಕ್ತಪೀಪಾಸು ಸ್ವಭಾವವು ನಾಶಹೊಂದಿ ಗರ್ವಭಂಗಿತನಾದನು. ಅಶೋಕನು ವಿಜಯದರಾತ್ರಿಯಂದು ರಣಭೂಮಿಯನ್ನು ಪರಿಶೀಲಿಸುತ್ತಿರುವಾಗ, ಎತ್ತನೋಡಿದರತ್ತ ವೀರಸ್ವರ್ಗವನ್ನು ಪಡೆದ ಯೋಧರೂ, ಅಶೋಕನನ್ನು ಶಪಿಸುತ್ತಿರುವ ಅವರ ವಿಧವೆಪತ್ನಿಯರೂ ಅವನ ಕಣ್ಣಿಗೆ ಬಿದ್ದರು. ಕಾಲುಮುರಿದುಕೊಂಡ ಕುದುರೆಗಳು ನೋವಿನಿಂದ ವಿಲವಿಲ ಒದ್ದಾಡುತ್ತಿದ್ದವು. ಆ ಘೋರ ದೃಶ್ಯವನ್ನು ನೋಡಿದ ಅಶೋಕನು ಕುಸಿದು ಕುಳಿತನು. ತನ್ನಿಂದ ಆದ ಈ ಹತ್ಯಾಕಾಂಡಕ್ಕಾಗಿ ರೋಧಿಸಿ ಹರಿದ ಅವನ ಕಣ್ಣೀರು ಅಲ್ಲಿ ಹರಿಯುತ್ತಿದ್ದ ಕಣ್ಣೀರಿನೊಂದಿಗೆ ಸೇರಿತು. 'ತಾನೇನು ಮಾಡಿಬಿಟ್ಟೆ ?' ಎಂದು ತನ್ನಿಂದಾದ ಘೋರ ಅನ್ಯಾಯಕ್ಕಾಗಿ ಪ್ರಲಾಪಿಸಿದನು ಅಶೋಕ. ರಾಜಧಾನಿಗೆ ಮರಳಿದ ಅಶೋಕನು ಸಂಪೂರ್ಣ ಬದಲಾಗಿದ್ದನು. ಕ್ರೌರ್ಯ, ಯುದ್ಧಗಳನ್ನು ತ್ಯಾಗಮಾಡಿದ ಅವನು ಶಾಂತಿ ಸಂಸ್ಥಾಪನಾ ಕಾರ್ಯದಲ್ಲಿ ತೊಡಗಿದನು. ನಂತರದಲ್ಲಿ ಭೌದ್ಧಧರ್ಮವನ್ನು ಸ್ವೀಕರಿಸಿದ ಅಶೋಕನು ಬುದ್ಧನ ತತ್ತ್ವಗಳಾದ ಪ್ರೇಮ, ಕರುಣೆ ಮತ್ತು ಶಾಂತಿಗಳನ್ನು ಅಳವಡಿಸಿಕೊಂಡು ಅದರ ಪ್ರಚಾರಕಾರ್ಯದಲ್ಲಿ ತೊಡಗಿದನು. 40 ವರ್ಷಗಳ ಆಳ್ವಿಕೆಯ ನಂತರ ತನ್ನ 72 ನೇವಯಸ್ಸಿನಲ್ಲಿ ಅಶೋಕನು ಮರಣಹೊಂದಿದನು. ಅವನು ಒಬ್ಬ ಸಮರ್ಥಆಡಳಿತಗಾರ, ಶಾಸಕ, ನಾಯಕ, ಸನ್ಯಾಸಿ ಮತ್ತು ಒಬ್ಬ ಶ್ರೇಷ್ಠ ಧರ್ಮಪ್ರಚಾರಕನಾಗಿ ಬಹುದೊಡ್ಡ ಕೊಡುಗೆಯನ್ನು ನೀಡಿದ್ದಾನೆ. 50 ವರ್ಷಗಳ ಬಳಿಕ ಉರುಳಿಬಿದ್ದ ಮೌರ್ಯಪರಂಪರೆಯ ಸಮರ್ಥರಾಜರಲ್ಲಿ ಅಶೋಕನು ಕೊನೆಯ ಶ್ರೇಷ್ಠ ಸಾಮ್ರಾಟ.

## 6.3.2 ಏಕತೆ

ನಾವೆಲ್ಲರು ವಿಭಿನ್ನ ವ್ಯಕ್ತಿತ್ವವನ್ನು ಹೊಂದಿದ್ದೇವೆ. ಈ ವಿಭಿನ್ನತೆಯನ್ನು ಮೆಚ್ಚಿ ಒಪ್ಪಿಕೊಂಡು ಎಲ್ಲರ ಅಂತರಂಗವು ಒಂದೇ ಎನ್ನುವ ಅಂಶವನ್ನು ಗುರುತಿಸುವುದನ್ನು ಮಕ್ಕಳಿಗೆ ಕಲಿಸುವುದು ಬಹಳ ಮುಖ್ಯ. ವಿಭಿನ್ನತೆಯಲ್ಲಿ ಏಕತೆಯನ್ನೂ, ಸುಂದರತೆಯನ್ನು ಕಂಡುಕೊಂಡು, ಎಲ್ಲರನ್ನೂ ಅವರಿದ್ದಹಾಗೆಯೇ ಒಪ್ಪಿಕೊಳ್ಳುವುದನ್ನು ಕಲಿತಾಗ ಮಾತ್ರ ನಾವು ಎಲ್ಲರೊಂದಿಗೆ ಸೌಹಾರ್ದದಿಂದ ಬದುಕಲು ಸಾಧ್ಯ. ಇದರಿಂದ ಇನ್ನಷ್ಟು ಹೆಚ್ಚು ಜನರೊಡನೆ ಒಡನಾಟ ಮತ್ತು ಸಹಕಾರಮನೋಭಾವದಿಂದ ನಾವು ಯಾವುದೇ ಪೂರ್ವಾಭಿಪ್ರಾಯವಿಲ್ಲದೆ ಬಾಳಬಹುದು.

ಅದೇರೀತಿ ನಾವು ಒಂದು ಗುಂಪಿನಮೇಲೆ ವಿಶ್ವಾಸವಿಟ್ಟಾಗ, ಜೀವನದ ಯಾವುದೇ ಪರಿಸ್ಥಿತಿಯಲ್ಲಾಗಲಿ ಆ ಗುಂಪಿನವರೆಲ್ಲರೂ ಒಟ್ಟಾಗಿ ನಿಂತಾಗಮಾತ್ರ ಯಶಸ್ವಿಗಳಾಗಾಲು ಸಾಧ್ಯ. ಗುಂಪಿನೊಳಗಿದ್ದೂ ಪ್ರತ್ಯೇಕವಾಗಿರುವುದು ನಿಸಂದೇಹವಾಗಿ ವೈಫಲ್ಯವೆ ಎಂದರ್ಥ. ಆದ್ದರಿಂದ 'ಏಕತೆಯಲ್ಲಿ ಬಲವಿದೆ' ಎಂಬ ಸತ್ಯವನ್ನು ಸದಾ ನೆನಪಿನಲ್ಲಿಟ್ಟುಕೊಳ್ಳುವುದೇ ಜಾಣತನ.

ಉದ್ದೇಶ :

- ಒಗ್ಗಟ್ಟು ಮತ್ತು ಒಗ್ಗಾಟ್ಟಾಗಿ ಪದಗಳ ಅರ್ಥವನ್ನು ವಿದ್ಯಾರ್ಥಿಗಳು ತಿಳಿಯುವರು.
- ಏಕತೆಯಲ್ಲಿ ಬಲವಿದೆ ಎನ್ನುವ ಅಂಶವನ್ನು ವಿದ್ಯಾರ್ಥಿಗಳು ಅರಿಯುವರು.
- ಸಮುದಾಯಬದುಕು ಮತ್ತು ಆಯ್ಕೆಗಳಲ್ಲಿರುವ ಪ್ರಯೋಜನಗಳನ್ನು ಹಾಗು ಅದರಲ್ಲಿನ ಭಿನ್ನತೆಗಳನ್ನು ಮಕ್ಕಳು ಮೆಚ್ಚುವುದನ್ನು ಕಲಿಯುತ್ತಾರೆ.

ವಿಧಾನ : ಚಿತ್ರಕಲೆ, ಕಥಾನಿರೂಪಣೆ ಮತ್ತು ಚರ್ಚೆ

ಸಮಯ : 40 ನಿಮಿಷಗಳು

ಚಟುವಟಿಕೆ 1 : ಕುಟುಂಬದಲ್ಲಿ ಒಗ್ಗಟ್ಟು – ನಿಮ್ಮ ಒಟ್ಟುಕುಟುಂಬದ ಚಿತ್ರ ರಚಿಸಿ.

ತಮ್ಮ ಕುಟುಂಬದ ಎಲ್ಲಾ ಸದಸ್ಯರನ್ನೊಳಗೊಂಡ ರೇಖಾಚಿತ್ರವನ್ನು ರಚಿಸಲು ಮಕ್ಕಳಿಗೆ ಸೂಚಿಸಿ. ಅವರು ಬಿಡಿಸಿರುವ ಚಿತ್ರದ ಬಗ್ಗೆ ಮಕ್ಕಳೊಂದಿಗೆ ಮಾತನಾಡಿ ಮತ್ತು ಮನೆಯ ಪ್ರತಿಯೊಬ್ಬರೂ ಹೇಗೆ ವಿವಿಧ ಕಾರ್ಯಗಳಲ್ಲಿ ತೊಡಗುವರು ಎಂಬುದನ್ನು ಒಂದು ವಾರಕಾಲ ಗಮನಿಸಲು ಹೇಳಿ. ವಿಭಿನ್ನ ಪಾತ್ರಗಳನ್ನು ವಹಿಸುವ ಮನೆಯಸದಸ್ಯರೆಲ್ಲರೂ ಕೂಡ ಒಂದು ಕುಟುಂಬದ ಮುನ್ನಡೆಗೆ ಬಹು ಪ್ರಮುಖರು. ತಮ್ಮ ಕುಟುಂಬದವರಲ್ಲದ, ಆದರೂ ತಮಗೆ ಸಹಾಯಮಾಡುವವರ (ಉದಾ: ಗೆಳೆಯರು) ಚಿತ್ರ ಬಿಡಿಸಲು ಮಕ್ಕಳಿಗೆನೆರವಾಗಿ. ತಮಗೆ ಸಹಾಯಮಾಡಿ ಎಂದು ಕೇಳಲು ಮತ್ತು ಸಹಾಯಮಾಡಿದವರಿಗೆ ಕೃತಜ್ಞತೆ ಸಲ್ಲಿಸಲು ಬಳಸಬಹುದಾದ ಭಾಷಾವಾಕ್ಯಗಳನ್ನು ಮಕ್ಕಳಿಗೆ ಕಲಿಸಿ. (ಉದಾ: “ದಯವಿಟ್ಟು ಸಹಾಯಮಾಡುವಿರಾ?” ಮತ್ತು “ಧನ್ಯವಾದಗಳು”). ಎಲ್ಲಾ ಮಾನವಜನಾಂಗವು ಒಂದೇ ಕುಟುಂಬಕ್ಕೆ ಸೇರಿದವರು, ಹಾಗಾಗಿ ಎಲ್ಲರೊಡನೆ ಪರಸ್ಪರ ಪ್ರೀತಿ ವಿಶ್ವಾಸದಿಂದ ನಡೆದುಕೊಳ್ಳಬೇಕೆನ್ನುವ ಅಂಶಗಳನ್ನು ಕುರಿತು ಮಕ್ಕಳೊಂದಿಗೆ ಚರ್ಚಿಸಿ.

ಚಟುವಟಿಕೆ 2 : ಕತೆ – ನಾಲ್ವರು ಮಕ್ಕಳು ಮತ್ತು ಕಡ್ಡಿಗಳ ಕಟ್ಟು

ಒಂದಾನೊಂದು ಹಳ್ಳಿಯಲ್ಲಿ ಓರ್ವ ವೃದ್ಧನು ಅವನ ನಾಲ್ವರು ಗಂಡುಮಕ್ಕಳೊಂದಿಗೆ ವಾಸಿಸುತ್ತಿದ್ದನು. ಆ ನಾಲ್ವರು ಮಕ್ಕಳು ಸದಾ ಜಗಳವಾಡುತ್ತಿದ್ದುದರಿಂದ ಆ ವೃದ್ಧನು ಬಹಳ ಚಿಂತೆಗೀಡಾಗಿದ್ದನು. ಅವರಲ್ಲಿ ಒಗ್ಗಟ್ಟು ಮೂಡಿಸಲು ವೃದ್ಧನು ಪಟ್ಟ ಪ್ರಯತ್ನವೆಲ್ಲಾ ವಿಫಲವಾಯಿತು.

ಒಂದುದಿನ ಅವನು ತನ್ನ ನಾಲ್ವರು ಮಕ್ಕಳನ್ನು ಕರೆದನು. ಪ್ರತಿಯೊಬ್ಬರಿಗೂ ಅವನು ನಾಲ್ಕು ಕಡ್ಡಿಗಳಿದ್ದ ಒಂದು ಕಟ್ಟನ್ನು ಅವರಿಗೆ ಕೊಟ್ಟು ಅದನ್ನು ಎರಡು ಭಾಗವಾಗಿ ಮುರಿಯಲು ಸೂಚಿಸಿದನು. ‘ಇದೇ ! ಬಹು ಸುಲಭ’ ಎಂದು ಬಹು ಹಗುರವಾಗಿ ನುಡಿದ ಮೊದಲನೆಯನು ಕಟ್ಟನ್ನು ತೆಗೆದುಕೊಂಡು ಮುರಿಯಲು ಪ್ರಯತ್ನಪಟ್ಟನು. ಎಷ್ಟೇ ಪ್ರಯತ್ನಪಟ್ಟರೂ ಮುರಿಯದ ಕಡ್ಡಿಯಕಟ್ಟನ್ನು ಕಂಡು ಅವನಿಗೆ ಅಚ್ಚರಿಯಾಯಿತು. ಕಡ್ಡಿಗಳ ಕಟ್ಟನ್ನು ಮುರಿಯಲಾಗದೆ ಅವನು ಏದುಸಿರು ಬಿಡುವಂತಾಯಿತು. ಆದರೆ ಕಟ್ಟನ್ನು ಮುರಿಯಲಾಗಲಿಲ್ಲ. ಅವನು ಸೋತುಹೋದನು. ಅಂತೆಯೇ ಅವನ ಮೂರುಜನ ತಮ್ಮಂದಿರು ಕೂಡ ಕಡ್ಡಿಗಳಕಟ್ಟನ್ನು ಮುರಿಯುವಲ್ಲಿ ವಿಫಲರಾದರು.

ವಿಫಲರಾದ ಮಕ್ಕಳನ್ನು ಕಂಡು ನಸುನಕ್ಕ ವೃದ್ಧ ತಂದೆಯು ಆ ಕಡ್ಡಿಗಳ ಕಟ್ಟನ್ನು ಬಿಚ್ಚಲು ಹೇಳಿದನು. ಪ್ರತಿಯೊಬ್ಬರೂ ತಲಾ ಒಂದೊಂದು ಕಡ್ಡಿಗಳನ್ನು ತೆಗೆದುಕೊಂಡು ಅದನ್ನು ಮುರಿಯಲು ಹೇಳಿದನು. ನಾಲ್ವರು ಮಕ್ಕಳೂ ಒಂದೊಂದು ಕಡ್ಡಿಯನ್ನು ತೆಗೆದುಕೊಂಡರು. ಕ್ಷಣಾರ್ಧದಲ್ಲಿ ಕಡ್ಡಿಗಳು ಮುರಿದುಬಿದ್ದವು.

"ಒಂದು ಕಡ್ಡಿಯನ್ನು ಮುರಿಯುವುದು ಸುಲಭ, ಆದರೆ ನಾಲ್ಕು ಕಡ್ಡಿಗಳು ಜೊತೆಯಾಗಿ ಒಂದುಗೂಡಿದಾಗ ಅವುಗಳನ್ನು ಮುರಿಯಲು ಅಸಾಧ್ಯ" ಎಂದು ಹೇಳಿದ ವೃದ್ಧನು ತನ್ನ ಮಕ್ಕಳೆಡೆ ಅರ್ಥಗರ್ಭಿತವಾಗಿ ನೋಡಿದನು.

ಈ ಬಾರಿ ಅವನ ಪಾಠವು ಕೆಲಸಮಾಡಿತು. ಅಣ್ಣತಮ್ಮಂದಿರು ಪರಸ್ಪರ ಹೊಡೆದಾಡುವುದನ್ನು ಬಿಟ್ಟುಬಿಟ್ಟರು. ಯಾವುದೇ ಕೆಲಸವಾಗಲಿ ಅವರು ನಾಲ್ವರೂ ಕೂಡಿ ಒಂದು ತಂಡದಂತೆ ಕೆಲಸಮಾಡಿ ಸದಾ ಯಶಸ್ಸುಪಡೆಯಲಾರಂಭಿಸಿದರು. 'ಏಕತೆಯಲ್ಲಿ ಬಲವಿದೆ' ಎಂಬ ಸತ್ಯವನ್ನು ಅವರು ನಾಲ್ವರು ಅರಿತುಕೊಂಡರು.

- ಕತೆಯಲ್ಲಿರುವ ನೀತಿಪಾಠವನ್ನು ವಿದ್ಯಾರ್ಥಿಗಳೊಂದಿಗೆ ಚರ್ಚಿಸಿ. ಈ 'ಕಡ್ಡಿಗಳಕಟ್ಟು' – ಕತೆಯನ್ನು ವಿದ್ಯಾರ್ಥಿಗಳು ಅಭಿನಯದೊಂದಿಗೆ ನಿರೂಪಿಸಲಿ. ಒಂದು ಕಡ್ಡಿಯನ್ನು ಮುರಿಯುವುದು ಎಷ್ಟು ಸುಲಭ, ಆದರೆ ಅದೇ ಒಂದು ಕಟ್ಟನ್ನು ಮುರಿಯುವುದು ಎಷ್ಟು ಕಷ್ಟ ಎಂಬ ಅಂಶವನ್ನು ಸಣ್ಣಕಡ್ಡಿಗಳ ಬಳಕೆಯಿಂದ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಸಿ. ತಮ್ಮ ಸ್ವಂತ ಪದಗಳಲ್ಲಿ ಮಕ್ಕಳಿಂದ ಪುನ: ಈ ಕತೆಯನ್ನು ಹೇಳಿಸಿ ಮತ್ತು ನಟನೆಯನ್ನು ಮಾಡಿಸಿ. ಕತೆಯನ್ನು ಪುನ: ಹೇಳಲು ಕತೆಯಲ್ಲಿನ ದೃಷ್ಟಾಂತಗಳನ್ನು ಬಳಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯಮಾಡಿ.
- ನಂತರ ಮಕ್ಕಳ ಮಿದುಳಿಗೆ ಸ್ವಲ್ಪ ಕೆಲಸಕೊಡುವಂತಹ ಸಮಯ. ಇತರರೊಂದಿಗೆ ಒಟ್ಟಾರೆಯಾಗಿ ಸೇರಿ ಸುಲಭವಾಗಿ ನಿರ್ವಹಿಸಿದಂತಹ ಕಾರ್ಯಚಟುವಟಿಕೆಗಳ ಕುರಿತು ಆಲೋಚಿಸುವಂತೆ ವಿದ್ಯಾರ್ಥಿಗಳಿಗೆ ಹೇಳಿ. ಉದಾಹರಣೆಗೆ, ಮನೆಯವರೊಂದಿಗೆ ಸೇರಿ ಮನೆಯನ್ನು ಸ್ವಚ್ಛಗೊಳಿಸುವುದು, ಮನೆಯಕೆಲಸಗಳನ್ನು ಎಲ್ಲರೂ ಸೇರಿ ನಿರ್ವಹಿಸುವುದು, ಸಹವಿದ್ಯಾರ್ಥಿಗಳೊಂದಿಗೆ ಸೇರಿ ತರಗತಿಯ ಒಪ್ಪ ಓರಣ, ನಾಟ್ಯ ಅಥವಾ ಗೀತೆಯ ಸಂಯೋಜನೆ, ಬೊಂಬೆಮನೆಯ ನಿರ್ಮಾಣ, ನಾಟಕದಲ್ಲಿ ಅಭಿನಯ ಅಥವಾ ಸಮೂಹಗಾಯನ, ತೋಟಗಾರಿಕೆ ಅಥವಾ ಸಹವಿದ್ಯಾರ್ಥಿಗಳೊಂದಿಗೆ ಸೇರಿ ಶಾಲೆಯ ಯೋಜನೆಯೊಂದರ ಯಶಸ್ವಿ ನಿರ್ವಹಣೆ.

- ವಿದ್ಯಾರ್ಥಿಗಳು ಇತರರಿಂದ ಪಡೆದ ಬೆಂಬಲದ ಅನುಭವ, ಅಥವಾ ಇತರರಜೊತೆಗೂಡಿ ಕೆಲಸಮಾಡಿದ ವೈಯಕ್ತಿಕ ಅನುಭವಗಳನ್ನು ಹಂಚಿಕೊಳ್ಳುವಂತೆ ಆಹ್ವಾನಿಸಿ. ಮಕ್ಕಳನ್ನು ಪ್ರೇರೇಪಿಸಲು ನೀವು ನಿಮ್ಮ ವೈಯಕ್ತಿಕ ಅನುಭವಗಳನ್ನು ಕುರಿತ ಕತೆಯೊಂದಿಗೆ ಆರಂಭಿಸುವುದು ಉತ್ತಮ.

## 6.3.3 ಹಂಚಿಕೊಳ್ಳುವಿಕೆ

ಭಿತ್ತಿಪತ್ರದಲ್ಲಿ ಹಾಕಬಹುದಾದ ಹಂಚಿಕೊಳ್ಳುವಿಕೆಯ ಕೆಲವು ಸರಳನಿಯಮಗಳು :

- ಇತರರ ವಸ್ತುವನ್ನು ಬಳಸುವ ಮುನ್ನ ಅವರಿಂದ ಒಪ್ಪಿಗೆಪಡೆದು ನಂತರ ಬಳಸುವುದು.
- ಇತರರು ಕೆಲಸ ಮುಗಿಸುವವರೆಗೂ ಕಾದು ನಂತರ ನೀವು ಆ ವಸ್ತುವನ್ನು ಬಳಸಬೇಕು.
- ಪರಸ್ಪರ ಸಹಾಯ ಮಾಡಿ.

ಉದ್ದೇಶ :

- ಯಾವರೀತಿ ಹಂಚಿಕೊಳ್ಳಬೇಕು ಎಂಬುದನ್ನು ಮಕ್ಕಳು ಅರಿತು ವಿವರಿಸುವರು.
- ತಾವು ಅರಿತ ಜ್ಞಾನವನ್ನು ಮಕ್ಕಳು ತಮ್ಮ ನಿಜಜೀವನದ ಸಂದರ್ಭಗಳಲ್ಲಿ ಬಳಸಲು ಕಲಿಯುವರು.

ವಿಧಾನ : ತರಗತಿಯಲ್ಲಿನ ಚಟುವಟಿಕೆಗಳು, ಕಥಾನಿರೂಪಣೆ

ಸಮಯ : **40** ನಿಮಿಷಗಳು

### ಚಟುವಟಿಕೆ : 1

ನಿಜವಾದ ಪ್ರೀತಿಯ ಅಸ್ತಿತ್ವಕ್ಕೆ ತ್ಯಾಗ ಅತ್ಯವಶ್ಯಕ. ಮಕ್ಕಳು ಪೋಷಕರಿಂದ ಪಡೆದ ಜೇಬುಹಣದಲ್ಲಿ ಸ್ವಲ್ಪ ಹಣವನ್ನು ಇತರರಿಗಾಗಿ ತ್ಯಾಗಮಾಡುವುದನ್ನು ಪ್ರೋತ್ಸಾಹಿಸುವುದರ ಮೂಲಕ ತ್ಯಾಗದ ಅನುಭವವನ್ನು ಮಕ್ಕಳು ಪಡೆಯುವುದಕ್ಕೆ ನಾವು ಸಹಾಯಮಾಡುವುದು. ಸ್ವಲ್ಪ ಸ್ವಲ್ಪ ಹಣವನ್ನು ಓಂದು ಜಾಡಿಯಲ್ಲಿ ಕೂಡಿಡುತ್ತಾ, ಅ ಜಾಡಿಯು ತುಂಬಿದ ನಂತರ ಆ ಹಣವನ್ನು ಅಗತ್ಯವಿರುವವರಿಗೆ ಮತ್ತು ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಕೊಡುವುದನ್ನು ಪ್ರೋತ್ಸಾಹಿಸುವುದು.

## ಚಟುವಟಿಕೆ : 2 ಕಥಾನಿರೂಪಣೆ

ಒಂದು ಊರಿನಲ್ಲಿ ಇಬ್ಬರು ಸಹೋದರರು ಇದ್ದರು. ಅವರು ಪರಸ್ಪರ ಬಹುವಾಗಿ ಪ್ರೀತಿಸುತ್ತಿದ್ದು, ಸದಾ ಜೊತೆಜೊತೆಯಾಗಿ ಆಡಿಕೊಳ್ಳುತ್ತಿದ್ದರು. ಹೀಗಿರಲು ಒಂದುದಿನ ಅವರ ನಡುವೆ ಆಟಿಕೆಗಳ ಕುರಿತು ದೊಡ್ಡವಾಗ್ವಾದ ಉಂಟಾಗಿ, ಕೊನೆಗೆ ಇನ್ನುಮುಂದೆ ಅವರಿಬ್ಬರು ಕೇವಲ ತಮ್ಮ ತಮ್ಮ ಸ್ವಂತ ಆಟಿಕೆಗಳೊಂದಿಗೆ ಮಾತ್ರ ಆಡಿಕೊಳ್ಳಬೇಕೆಂದು ತೀರ್ಮಾನಿಸಿದರು.

ಹೀಗೆಯೇ ದಿನಗಳುರುಳಿದರೂ ಏನೂ ಬದಲಾವಣೆಯಾಗಲಿಲ್ಲ. ಪ್ರತಿದಿನವೂ ಅವರನಡುವೆ ಯಾವ ವಸ್ತುವು ಯಾರಿಗೆ ಸೇರಬೇಕೆಂಬುದರ ಸಲುವಾಗಿ ಜಗಳವಾಗುತಿತ್ತು. ಬರಬರುತ್ತಾ ಇಬ್ಬರೂ ಸಹೋದರರ ಮುಖದಲ್ಲಿ ನಗುವು ಮಾಯವಾಗಿ ಇಬ್ಬರೂ ಸಿಡುಕು ಸ್ವಭಾವದವರಾದರು.

ಒಂದು ಬೆಳಗು ಅವರು ಎಂದಿನಂತೆ ಆಟವಾಡಲು ಹೊರಗೆ ಬಂದಾಗ ಅಚ್ಚರಿಯೊಂದು ಕಾದಿತ್ತು. ಅವರೀರ್ವರ ಆಟಿಕೆಗಳು ಒಂದರೊಡನೆ ಒಂದು ಬೆರೆತು ಒಂದು ದೊಡ್ಡ ಆಟಿಕೆಯ ಗುಡ್ಡೆಯಾಗಿತ್ತು. ಅವರಿಬ್ಬರ ಆಟಿಕೆಗಳನ್ನು ಒಂದರೊಡನೊಂದು ಒಟ್ಟಾರೆಯಾಗಿ ಅಲ್ಲಿ ಯಾರೋ ಬೆರೆಸುತ್ತಿದ್ದರು. ಆಟಿಕೆಗಳನ್ನು ಪ್ರತ್ಯೇಕಿಸುವ ಎಷ್ಟೋ ಸಮಯದ ಅವರ ಪ್ರಯತ್ನ ಇಂದು ವಿಫಲವಾಗಿತ್ತು.

ಕೋಪಗೊಂಡ ಸಹೋದರರು ಇದಕ್ಕೆ ಕಾರಣ ಯಾರು ಎಂದು ಹುಡುಕಲು ಪ್ರಯತ್ನಿಸಿದರು. ಆಟಿಕೆಗಳದೊಡ್ಡ ಗುಡ್ಡೆಯ ಆಚೆ ಬದಿ ಆಡುತ್ತಿದ್ದ ಎರಡು ಮಕ್ಕಳನ್ನು ಅವರು ಕಂಡರು. ತಾವು ಆಟಿಕೆಗಳನ್ನು ಬೆರೆಸುತ್ತಿದ್ದೇವೆ ಎಂಬ ಯಾವ ಗಮನವೂ ಇಲ್ಲದೆ ಅಲ್ಲಿರುವ ಆಟಿಕೆಗಳೊಡನೆ ಅವರು ಆಟವಾಡುತ್ತಿದ್ದರು. ಬಹಳ ಆನಂದದಿದ ಆಡುತ್ತಿದ್ದ ಅವರ ಮುಖದಲ್ಲಿ ಸಂತೋಷವು ತುಂಬಿತುಳುಕುತ್ತಿತ್ತು.

ಮಕ್ಕಳ ಸಂತೋಷವನ್ನು ಕಂಡ ಸಿಡುಕು ಸಹೋದರರು ತಾವು ಇಷ್ಟುದಿನ ಎಷ್ಟು ಮೂರ್ಖತನದಿಂದ ವರ್ತಿಸಿರುವುದನ್ನು ಅರಿತರು. ಸಂತೋಷದಿಂದ ಆಡುವುದನ್ನು ಬಿಟ್ಟು, ಅದಕ್ಕೆ ಬದಲಾಗಿ ಸಂಪೂರ್ಣಸಮಯನ್ನು ಕೇವಲ ಆಟಿಕೆಗಳ ವಿಂಗಡಣೆಯಲ್ಲಿ ಕಳೆದುದಕ್ಕಾಗಿ ವ್ಯಥೆಪಟ್ಟರು.

ಅಂದಿನಿಂದ ಅವರು ತಮ್ಮ ಆಟಿಕೆಗಳನ್ನೆಲ್ಲಾ ಒಟ್ಟುಮಾಡಿ, ಅ ಇನ್ನಿಬ್ಬರು ಮಕ್ಕಳೊಂದಿಗೆ ಆಡಲಾರಂಭಿಸಿದರು. ಜನರೆಲ್ಲಾ ಕರೆಯುತ್ತಿದ್ದ 'ಸಿಡುಕುಸಹೋದರರು' ಎನ್ನುವ ಬಿರುದು ಮಾಯವಾಯಿತು. ಈಗ ಎಲ್ಲರೂ ಅವರನ್ನು 'ಜಾಣಮಕ್ಕಳು' ಎಂದು ಕರೆಯಲಾರಂಭಿಸಿದರು.

## 6.3.4 ಸಹನೆ

ಸಹನೆಯ ಮುಖ್ಯ ಗುಣವೆಂದರೆ ಯಾವುದೇ ಗೊಣಗಾಟವಿಲ್ಲದೆ, ಆಕ್ಷೇಪಣೆಯಿಲ್ಲದೆ ಶಾಂತಿಯಿಂದ ಕಾಯುವುದು. ಕೆಲವು ವಿಷಯಗಳು ಅದಕ್ಕೆ ತಕ್ಕ ಸಮಯವನ್ನು ತೆಗೆದುಕೊಳ್ಳುತ್ತದೆ. ಉದಾ : ಬೆಳವಣಿಗೆ, ಒಂದೆಡೆಯಿಂದ ಮತ್ತೊಂದೆಡೆಗೆ ಪ್ರಯಾಣ, ಹೊಸತನ್ನು ಕಲಿಯುವುದು ಇತ್ಯಾದಿ. ಒಬ್ಬ ಸಹನಾಮಯಿ ವ್ಯಕ್ತಿಯು ಇಂತಹ ಸಂದರ್ಭಗಳಲ್ಲಿ ಸಕಾರಾತ್ಮಕ ದೃಷ್ಟಿಕೋನ ಮತ್ತು ಸಕಾರಾತ್ಮಕ ಮನೋವೃತ್ತಿಯಿಂದ ಪ್ರತಿಕ್ರಯಿಸುವನು.

ತಾಳ್ಮೆಯು ಬದುಕಿನ ಅಂದು ಅಗತ್ಯವಾದ ಭಾಗವಾಗಿದೆ. ಕಷ್ಟದ ಪರಿಸ್ಥಿತಿಗಳನ್ನೆದುರಿಸುವಾಗ ಹತಾಶೆಗೊಳ್ಳುವುದರ ಬದಲು, ಕೋಪಗೊಳ್ಳದೆ, ಅಸಮಾಧಾನಗೊಳ್ಳದೆ ಸರಿಯಾದ ರೀತಿಯಲ್ಲಿ ಪ್ರತಿಕ್ರಿಯಿಸುವುದಕ್ಕೆ ಸಹನೆಯು ಸಹಾಯವೆಸಗುತ್ತದೆ. ಶಾಲೆಯಲ್ಲಾಗಲಿ, ಮನೆಯಲ್ಲಾಗಲಿ, ಕಾರು ಓಡಿಸುವಾಗಲಿ ಅಥವಾ ದಿನಸಿವ್ಯಾಪಾರಿಯ ಬಳಿಯಾಗಲಿ ಇಂತಹ ಗುಣವು ಪ್ರತಿಯೊಬ್ಬರ ಬದುಕನ್ನು ಉತ್ತಮವಾಗಿಸುತ್ತದೆ.

ನಾನು :

- ನನ್ನ ಸರದಿಗಾಗಿ ಕಾಯುತ್ತೇನೆ.
- ನನಗೆ ಹಾದಿಯು ಸಿಗದಾದಾಗ ವಿನಾಕಾರಣ ದೂರುವುದಿಲ್ಲ.
- ಬದಲಾಯಿಸಲಾಗದ್ದನ್ನು ಅದಿದ್ದಹಾಗೆಯೇ ಸ್ವೀಕರಿಸುತ್ತೇನೆ.
- ನನ್ನ ಸಮಯವನ್ನು ಜಾಣತನದಿಂದ ಉಪಯೋಗಿಸುತ್ತೇನೆ.
- ಮರಳಿಯತ್ನವ ಮಾಡುವೆ.

ಉದ್ದೇಶ :

ಇದರಿಂದ ಮಕ್ಕಳು :

- ತಮ್ಮ ಸರದಿಗಾಗಿ ಕಾಯುವುದನ್ನು ಕಲಿಯುವರು.
- ಹೆಚ್ಚು ಸಮಯಬೇಕಾದ ಸಂದರ್ಭಗಳಲ್ಲಿ ಸಹನೆಯಿಂದಿರುತ್ತಾರೆ.

ವಿಧಾನ : ಮಕ್ಕಳ ಕಾರ್ಯಚಟುವಟಿಕೆಗಳು, ಕಥಾನಿರೂಪಣೆ, ಕವನವಾಚನ

ಸಮಯ : 60 ನಿಮಿಷಗಳು

ಚಟುವಟಿಕೆಗಳು :

ಮಗುವಿಗೆ ಕಾಯುವುದನ್ನು ಹೇಗೆ ಕಲಿಸಬೇಕು

- ವಿಷೇಶವಾಗಿ ಸುರಕ್ಷತೆಯ ಅಗತ್ಯವಿರುವ ಸಂದರ್ಭಗಳಲ್ಲಿ ಕಾಯುವುದು ಹೇಗೆ ಎಂಬುದನ್ನು ಮತ್ತೆ ಮತ್ತೆ ವಿವರಿಸಿ.
- ಸಾಮಾನ್ಯವಾಗಿ ಕಾಯುವಿಕೆಯನಂತರ ದೊರೆಯಬಹುದಾದ ಪ್ರತಿಫಲವನ್ನು ಮಕ್ಕಳಿಗೆ ದೊರಕಿಸಿ. ಉದಾ : ಸ್ವಚ್ಚಗೊಳಿಸುವಕ್ರಿಯೆಯ ನಂತರ ಪ್ರತಿಫಲವಾಗಿ ಆಟವಾಡಿಸುವುದು.
- ಕಾಯುವುದನ್ನು ಕಲಿಸುವುದಕ್ಕಾಗಿ ಮಕ್ಕಳಿಗೆ ಲಂಚನೀಡಬೇಡಿ. ಏಕೆಂದರೆ, ಸಮಂಜಸವಾದ ವರ್ತನೆಗಾಗಿ ಸದಾ ಪುರಸ್ಕಾರವನ್ನು ಬಯಸುವ ಮನೋಭಾವವನ್ನು ಅದು ಅವರಲ್ಲಿ ಬೆಳೆಸಬಹುದು.
- ಕಾಯಬೇಕಾದ ಸಂದರ್ಭದಲ್ಲಿ ನಿಮ್ಮ ಮಗುವನ್ನು ಯಾವುದಾದರೂ ಆಟದಲ್ಲಿ ತೊಡಗಿಸುವ ಮೂಲಕ ಕಾಯುವಿಕೆಯನ್ನು ಒಂದು ಆಟವಾಗಿ ಮಾರ್ಪಡಿಸಿ.

ಚರ್ಚೆಯ ಆರಂಭಿಕ ಅಂಶಗಳು :

- ತಾಳ್ಮೆಯಿಂದ ಕಾಯಬೇಕಾದ ಕೆಲವು ಸಂದರ್ಭಗಳು ಯಾವುವು ? ಶಾಲೆ ಅಥವಾ ಮನೆಯ ಸಂದರ್ಭಗಳಿಂದ 5 ನಿರ್ದಿಷ್ಟ ಉದಾಹರಣೆಗಳನ್ನು ಕೊಡಿ.
- ಮಕ್ಕಳುನೀಡಿದ ಉದಾಹರಣೆಗಳತ್ತ ಕೊಂಚ ಗಮನಹರಿಸಿ. ಆ ಪರಿಸ್ಥಿತಿಗಳು ನಿಮ್ಮ ಹತೋಟಿಯಲ್ಲಿದೆಯೇ? ನಿಮ್ಮ ಹತೋಟಿಯಲ್ಲಿಲ್ಲದಿರುವುದು ಯಾವುದು ?
- ತಾಳ್ಮೆ/ ಸಹನೆಯ ವಿರುದ್ಧಪದ ಯಾವುದು ? ( ದೂರುವುದು, ಗೊಣಗಾಡುವುದು, ಸಿಡುಕುವುದು ) ಅದು ಏನನ್ನು ಸಾಧಿಸಿದಂತಾಗುತ್ತದೆ ? ಸಹನೆಯಿಲ್ಲದೆ ದೂರುವುದು ನಿಮ್ಮ ನಡತೆಯಲ್ಲಿ ಯಾವ ರೀತಿಯ ಪರಿಣಾಮ ಬೀರುತ್ತದೆ ?
- ಸಹನಾಶಕ್ತಿಯು ನಿಮ್ಮ ಬದುಕಿನಲ್ಲಿ ಯಾವರೀತಿಯ ಸಹಾಯ ಮಾಡಬಹುದು ಎಂದು ನಿಮಗನಿಸುತ್ತದೆ ?

ತಾಳ್ಮೆಕಲಿಕೆಯ ಕುರಿತ ಚಟುವಟಿಕೆಗಳು :

1. ಸರದಿ ತೆಗೆದುಕೊಳ್ಳುವುದು

- ಸಾಲಿನಲ್ಲಿ ಕೊನೆಯವನಾಗಿ ನಿಲ್ಲಲು ಯಾವ ಮಗುವೂ ಬಯಸುವುದಿಲ್ಲ ಅಥವಾ ಯಾವುದಾದರು ಜನ್ಮದಿನದಂದು ಕೊಟ್ಟಕೊನೆಯಲ್ಲಿ ಸಿಹಿಯನ್ನು ಸ್ವೀಕರಿಸಲು ಒಪ್ಪುವುದಿಲ್ಲ. ಆದರೆ ಕಾಯುವಿಕೆಯು ಜೀವನದ ಒಂದು ಅವಿಭಾಜ್ಯ ಅಂಗ. ಮಕ್ಕಳು ತಾವು ಮಾತ್ರವೇ ಎಲ್ಲದಕ್ಕೂ ಕಾಯಬೇಕಾದವರಲ್ಲ ಎಂದು ಅರಿಯುವುದು ಬಹಳ ಮುಖ್ಯ. ಅವರು ಯಾವಗಲೂ ಕೊನೆಯವರೂ ಅಲ್ಲ, ಹಾಗೆಯೇ ಮೊದಲಿಗರೂ ಅಲ್ಲ ಎನ್ನುವುದನ್ನು ಮಕ್ಕಳು ತಿಳಿಯಬೇಕು.
- ಕಾಯಬೇಕಾದ ಸಂದರ್ಭಗಳಲ್ಲಿ, ಮನಸ್ಸಿನಲ್ಲಿಯೇ ಮಾಡಿಕೊಳ್ಳಬಹುದಾದ ತರಗತಿಯ ಕೆಲವು ವಿಷಯಗಳನ್ನು ಅವರಿಗೆ ತಿಳಿಯಪಡಿಸುವುದು. ಉದಾಹರಣೆಗೆ, ಮನಸ್ಸಿನಲ್ಲಿಯೇ ಎಣಿಸುವುದು, ಮಗ್ಗಿ ಹೇಳಿಕೊಳ್ಳುವುದು, ಹತ್ತಿರವಿರುವ ಭಿತ್ತಿಪತ್ರಗಳನ್ನು ಮತ್ತು ಸೂಚನೆಗಳನ್ನು ಓದುವುದು, ಪ್ರಾಸಪದಗಳ ಬಗ್ಗೆ ಆಲೋಚಿಸುವುದು, ಗಣಿತದ ಕೆಲವು ಅಂಶಗಳನ್ನು ಮನನಮಾಡುವುದು ಇತ್ಯಾದಿ.
- ಕೆಲವು ಆಟಗಳು, ಅದರಲ್ಲೂ ಹಾವು – ಏಣಿಯಾಟ, ಪಗಡೆ, ಲೂಡೊಗಳಂತಹ ಬೋರ್ಡ್ ಮೇಲೆ ಆಡುವಂತಹ ಆಟಗಳು ತಮ್ಮ ಸರದಿಗಾಗಿ ಕಾಯುವುದನ್ನು ಕಲಿಯಲು ಮಕ್ಕಳಿಗೆ ತಕ್ಕ ಸಾಧನ. ತರಗತಿಗಳಲ್ಲಿ ಮಕ್ಕಳನ್ನು ಹಲವು ತಂಡಗಳನ್ನಾಗಿ ವಿಭಜಿಸಿ, ಬೋರ್ಡ್ (ಹಲಿಗೆ) ಮೇಲೆ ಸರದಿಪ್ರಕಾರ ಬರೆಸುವುದು, ಕಾಗುಣಿತ ಹೇಳಿಸುವುದು, ಗಣಿತದ ಅಂಶಗಳನ್ನು ಹೇಳಿಸುವುದು ಇತ್ಯಾದಿ
- ಯಾವುದಾದರೂ ನಿರ್ದಿಷ್ಟ ವಿಷಯವನ್ನು ಕುರಿತು ಸರದಿಯಲ್ಲಿ ಒಬ್ಬರಾದ ನಂತರ ಮತ್ತೊಬ್ಬರು ಮಾತನಾಡಹುದು. 'ನಿಮಗಿಷ್ಟವಾದ ತಿನಿಸು' ಅಥವಾ 'ನಿಮಗಿಷ್ಟವಾದ ಪ್ರಾಣಿ'ಯಂತಹ ವಿಷಯಗಳನ್ನು ಮಕ್ಕಳಿಗೆ ಕೊಡುವುದು. ಇಬ್ಬರು ಮಕ್ಕಳು ಒಂದೇ ವಿಷಯವನ್ನು ಕುರಿತು ಸರದಿಪ್ರಕಾರ ಒಂದೊಂದು ಅಂಶಗಳನ್ನು ಹೇಳುವುದು.

2. ಏನನ್ನೂ ಮಾಡದೆ ಕೇವಲ ಸುಮ್ಮನೆ ಕಾಯುವುದು

- ಶಾಲೆಯ ಹಲವು ಸಂದರ್ಭಗಳಲ್ಲಿ ಮಕ್ಕಳು ಏನನ್ನೂ ಮಾಡದೆ ಸುಮ್ಮನೆ ಕುಳಿತು ಕಾಯಬೇಕಾದ್ದನ್ನು ಕಲಿಯಬೇಕಾಗುತ್ತದೆ. ಊಟದ ವಿರಾಮಕ್ಕಾಗಿ ಕಾಯುವುದು, ಶೌಚಾಲಯ ಬಳಕೆಗಾಗಿ ಕಾಯುವುದು, ಅಂಗಡಿಗಳಲ್ಲಿ, ಹಾಲಿನ ಬೂತ್‌ನಲ್ಲಿ, ಬಸ್ಸು ಅಥವಾ ರೈಲುನಿಲ್ದಾಣದಲ್ಲಿ, ವೈದ್ಯರಬಳಿ ಸಲಹೆಗಾಗಿ ಇತ್ಯಾದಿ ಸಂದರ್ಭಗಳಲ್ಲಿ ಏನನ್ನೂ ಮಾಡಲಾರದೆ ನಮ್ಮ ಸರದಿಗಾಗಿ ಕಾಯಬೇಕಾದ ಸಹನೆ ಇರಬೇಕಾಗುತ್ತದೆ.
- ಶಾಲೆಯ ಆವರಣದಾಚೆ, ದೈನಂದಿನ ಬದುಕಿನಲ್ಲಿ ಇದೇರೀತಿ ತಾಳ್ಮೆಯಿಂದ ತಮ್ಮ ಸರದಿಗಾಗಿ ಕಾಯಬೇಕಾದ ಸಂದರ್ಭಗಳ ಕುರಿತು ಮಕ್ಕಳೊಂದಿಗೆ ಮಾತನಾಡುವುದು. ವೈದ್ಯರಬಳಿ, ಅಂಗಡಿಗಳಲ್ಲಿ, ಟಿಕೆಟ್‌ಗಳನ್ನು ಖರೀದಿಸುವಾಗ, ಅಪ್ಪ ಅಮ್ಮಂದಿರು ತಮ್ಮ ಕೆಲಸಗಳಲ್ಲಿ ನಿರತರಾಗಿದ್ದಾಗ ಇತ್ಯಾದಿ.
- ಇಂತಹ ಸಮಯಗಳಲ್ಲಿ ಏನನ್ನು ಮಾಡಬಹುದು ಎಂಬುದರ ಬಗ್ಗೆ ಮಕ್ಕಳಿಗೆ ಆಲೋಚಿಸಲು ಹೇಳಿ. ಅಂತಹ ಸಮಯಗಳಲ್ಲಿ ಮನದಲ್ಲಿಯೇ ಹಾಡನ್ನು ಗುನುಗುವುದು, ಎಣಿಸುವುದು, ಕಥೆಗಳನ್ನು ಹೆಣೆಯುವುದು, ನೆರಳುಬೊಂಬೆಯಾಟವಾಡುವುದು, ಪಿಸುಮಾತು ಇತ್ಯಾದಿ.

3. ಕಲಿಕೆಯ ಸಮಯದಲ್ಲಿ ಅಥವಾ ಯಾವುದಾದುದರ ನಿರ್ಮಾಣ ಸಮಯಗಳಲ್ಲಿ ಸಹನೆಯ ಅಗತ್ಯತೆ

- ಮಕ್ಕಳಿಗೆ ತಾಳ್ಮೆ, ಸಹನೆ, ಸಂಯಮ ಈ ಪದಗಳ ಪರಿಚಯ ಮಾಡಿಸಿ.
- ಕೆಲವೊಮ್ಮೆ ಆತಂಕದ ಪರಿಸ್ಥಿತಿ ಉಂಟಾಗಿ, ಚಡಪಡಿಕೆಯಿದ್ದಾಗ ಸ್ವಲ್ಪ ವಿರಾಮತೆಗೆದುಕೊಳ್ಳಬಹುದು ಎಂಬುದನ್ನು ಮಕ್ಕಳು ತಿಳಿಯಬೇಕು. ಇದನ್ನು ತರಗತಿಯ ಚಟುವಟಿಕೆಗಳ ನಡುವೆ ಒಂದು ಸಣ್ಣವಿರಾಮ ತೆಗೆದುಕೊಳ್ಳುವುದರ ಮೂಲಕ ತಿಳಿಯಪಡಿಸಬಹುದು.
- ಚಟುವಟಿಕೆಗಳ ನಡುವೆ, ಕೆಲಸವನ್ನು ಸ್ವಲ್ಪ ನಿಲ್ಲಿಸಿ ದೀರ್ಘ ಉಚ್ಛ್ವಾಸ ನಿಶ್ವಾಸಗಳನ್ನು ಅಭ್ಯಾಸಮಾಡಿಸಿ. ನಂತರ ಮರಳಿ ಕೆಲಸದ ಬಗ್ಗೆ ಗಮನಹರಿಸುವುದನ್ನು ಮಕ್ಕಳಲ್ಲಿ ಬೆಳೆಸಿ. ಚಿತ್ರಬಿಡಿಸುವಾಗಲೊಮ್ಮೆ, ಬರವಣಿಗೆಯ ನಡುವೆಯಲ್ಲೊಮ್ಮೆ ಒಂದು ಸಣ್ಣವಿರಾಮ ತೆಗೆದುಕೊಳ್ಳುವ ಮೂಲಕ ಇದನ್ನು ತಿಳಿಯಪಡಿಸಬಹುದು.

- ರೇಖಾಚಿತ್ರಬಿಡಿಸುವುದು / ಚುಕ್ಕಿಗಳನ್ನು ಸೇರಿಸಿ ಚಿತ್ರ ರಚಿಸಿ ಬಣ್ಣವನ್ನು ತುಂಬುವುದು.

4. ವಿಷೇಶ ಸಂದರ್ಭಗಳಿಗಾಗಿ ಕಾಯುವುದು

- ಹಬ್ಬಗಳಿಗಾಗಿ, ಹೊಸಬಟ್ಟೆಗಾಗಿ, ಜನುಮದಿನದ ಆಚರಣೆಗಾಗಿ ಹೀಗೆ ನಾವು ಹಲವು ವಿಷೇಶಸಂದರ್ಭಗಳಿಗಾಗಿ ಕಾಯುತ್ತಿರುತ್ತೇವೆ.
- ನೀವೂ ಕೂಡ ಕಾಯುತ್ತಿರುವ ವಿಷಯಗಳ ಬಗ್ಗೆ ಮಕ್ಕಳಿಗೆ ತಿಳಿಸಿ. ತಾವು ಮಾತ್ರವೇ ಇದಕ್ಕಾಗಿ ಒದ್ದಾಡುತ್ತಿರುವವರಲ್ಲವೆಂದು ಅವರು ಅರಿಯಬೇಕು. ದಿನಗಳನ್ನು ಎಣಿಸುತ್ತಾ, ಬೇರೆ ವಿಷಯಗಳತ್ತ ಗಮನ ಕೇಂದ್ರೀಕರಿಸುತ್ತಾ ನೀವು ಹೇಗೆ ಸಹನೆಯಿಂದ ಕಾಯುವುದನ್ನು ನಿರ್ವಹಿಸುತ್ತಿರಿ ಎಂಬುದು ಮಕ್ಕಳಿಗೆ ತಿಳಿಯಲಿ.
- ಯಾವುದಾದರೂ ಅರ್ಥವತ್ತಾದ, ಸ್ವಾರಸ್ಯವಾದ ವಿಷಯದ ಬಗ್ಗೆ ಕಾಯಬೇಕಾದಾಗ, ಅದರ ಬಗ್ಗೆ ನಮ್ಮ ಒಲವು ಇನ್ನೂ ಹೆಚ್ಚಾಗಿ ಅದು ನಮ್ಮದು ಎನ್ನುವ ಜವಾಬ್ದಾರಿಯುತ ಭಾವನೆ ಬೆಳೆಯುತ್ತದೆ. ಉದಾ : ಬೀಜಾಂಕುರವಾಗಿ ಪುಟ್ಟ ಸಸಿಯು ಬೆಳೆಯುದನ್ನು ನೋಡಲು ಚೆನ್ನ. ಮೊಟ್ಟೆಗಳಿಂದ ಚಿಟ್ಟೆಗಳು ಹೊರಬರುವುದನ್ನು ಕಾದು ನೋಡಲು ಚೆಂದ.
- ಒಟ್ಟಿಗೆ ಎಲ್ಲರೂ ಸೇರಿ ಅಡುಗೆ ಮಾಡುವುದು : ಎಲ್ಲರೂ ಸೇರಿ ಒಟ್ಟಿಗೆ ಅಡುಗೆ ಮಾಡುವುದು ಒಂದು ಒಳ್ಳೆಯಪಾಠ. ಜೊತೆಗೆ ರುಚಿಕರವಾದ ಪ್ರತಿಫಲ ಕೂಡ.

ಕಥೆ : ಮಂದಗಮನೆ ಚೆಂಡುಹೂವು

ಶಿಕ್ಷಕರೊಬ್ಬರು ಒಮ್ಮೆ ತಮ್ಮ ವಿದ್ಯಾರ್ಥಿಗಳಿಗೆ ಚೆಂಡುಹೂವಿನ ಬೀಜಗಳನ್ನು ಕೊಟ್ಟು ಅದನ್ನು ನೆಟ್ಟು ನೋಡಿಕೊಳ್ಳುವಂತೆ ಸೂಚಿಸಿದರು. ಚೆಂಡುಹೂವನ್ನು ಬಹುವಾಗಿ ಇಷ್ಟಪಡುತ್ತಿದ್ದ ಬಾಲಕನೊಬ್ಬನು ತುಂಬು ಹುರುಪಿನಿಂದ ಅದನ್ನು ನೆಟ್ಟು ಬಹು ಅಕ್ಕರೆಯಿಂದ ಜೋಪಾನವಾಗಿ ನೋಡಿಕೊಂಡನು.

ಕೊನೆಗೂ ಚೆಂಡುಹೂವಿನ ಸಸಿ ಚಿಗುರೊಡೆದು ಮೊದಲ ಕುಡಿ ಕಾಣಿಸಿಕೊಂಡಿತು. ಸಹನೆಯಿಲ್ಲದ ಬಾಲಕನು ತಕ್ಷಣ ಶಿಕ್ಷಕರನ್ನು ಕುರಿತು " ಈಗ ನಾನು ಈ ಗಿಡವನ್ನು ಕೀಳಬಹುದೇ?" ಎಂದು ಕೇಳಿದನು. ಆ ಪುಟ್ಟ ಸಸಿಯನ್ನು ಇನ್ನೂ ಹಲವು ದಿನಗಳು ಆರೈಕೆ ಮಾಡಬೇಕೆಂದೂ ನಂತರ ಕೇವಲ ಒಂದು ಚೆಂಡುಹೂವಿನಿಂದ ಹಲವು ಬೀಜಗಳನ್ನು ಪಡೆಯಬಹುದೆಂದು ಶಿಕ್ಷಕರು ತಿಳಿ ಹೇಳಿದರು. ಬಾಲಕನು ನಿರಾಶೆಗೊಂಡರೂ ಸಸಿಯನ್ನು ಪೋಷಿಸಿದನು.

ಹಲವುದಿನಗಳ ನಂತರ ಅಸಹನೆ ತಡೆಯಲಾಗದ ಬಾಲಕನು ಗಿಡವನ್ನು ತಾನು ಕೀಳುವುದಾಗಿ ಶಿಕ್ಷಕರನ್ನು ಕಾಡಿದನು. ಅವನಿಗೆ ಸಹನೆಯಿಂದಿರಲು ಶಿಕ್ಷಕರು ಎಷ್ಟು ಹೇಳಿದರೂ ಕೇಳದ ಆ ಬಾಲಕನು ಚೆಂಡುಹೂವಿನ ಹೊಸಬೀಜಗಳನ್ನು ಕಂಡ ಕ್ಷಣ ಅದನ್ನು ತಿನ್ನಲೋಸುಗ ಗಿಡವನ್ನು ತುಂಡರಿಸಿದನು. ಇನ್ನೂ ಪಕ್ವವಾಗಿರದ ಎಳೆ ಗಿಡದ ತಿನ್ನಲುಸಾಧ್ಯವಾಗದ ಬೀಜಗಳು ಅವು.

ಬಾಲಕನು ಅಸಂತುಷ್ಟನಾದನು. ಹೂವಿನಗಿಡವನ್ನು ಜೋಪಾನವಾಗಿ ಪೋಷಿಸಿದ ಇಷ್ಟುದಿನದ ಅವನ ಪ್ರಯತ್ನವೆಲ್ಲಾ ಕೇವಲ ಅವನ ಅಸಹನೆಯ ಕಾರಣದಿಂದ ನಾಶವಾಯಿತು. ತನ್ನ ಸಹಪಾಠಿಗಳ ದೊಡ್ಡ ದೊಡ್ಡ ಹೂವುಗಳನ್ನು ಕಂಡ ಅವನ ಕೋಪ ಇಮ್ಮಡಿಯಾಯಿತು. ಆದರೆ ಕೊನೆಗೆ ಇನ್ನು ಮುಂದೆ ತಾನು ತಾಳ್ಮೆಕಳೆದುಕೊಳ್ಳಬಾರದೆಂದು, ಶಿಕ್ಷಕರ ಮಾತನ್ನು ಕೇಳಬೇಕೆಂದು ಅಂತಿಮವಾಗಿ ತೀರ್ಮಾನಿಸಿಕೊಂಡನು. ಸುಯೋಗದಿಂದ, ಅವನು ಸಂಪೂರ್ಣವಾಗಿ ಅದೃಷ್ಟದಿಂದ ವಂಚಿತನಾಗಿಲ್ಲವಾದ್ದರಿಂದ ಅವನ ಒಳ್ಳೆಯ ಮನಸ್ಸಿನ ಗೆಳೆಯರು ರುಚಿಕರವಾದ ಚೆಂಡುಹೂವಿನ ಬೀಜಗಳನ್ನು ಅವನೊಂದಿಗೆ ಹಂಚಿಕೊಡರು.

### ಕವನ : ಸಹನೆ, ಕ್ಷಮೆ ಮತ್ತು ವಿಧೇಯತೆ

( ರಚನೆ : ಪಾರುಲ್ ದಾವರ್ )

ನನ್ನ ಸರದಿಗಾಗಿ ನಿಂತು ಕಾಯುವಾಗ;
ಕಲಿತೆನಾನು ಸ್ಥೈರಣೆ ಹಾಗು ಸಹಿಷ್ಣುತೆ.
ಮಾಡಿದ ತಪ್ಪಿಗಾಗಿ ಕ್ಷಮಾಪಣೆ ಬೇಡಿದಾಗ;
ಕಲಿತೆ ನಾನು ಕ್ಷಮಾಶೀಲತೆ ಹಾಗು ವಿನಮ್ರತೆ.
ಶಿಕ್ಷಕರಿಗೆ ಮತ್ತು ಪೋಷಕರಿಗೆ ವಿಧೇಯನಾಗಿ ನಡೆದಾಗ;
ಕಲಿತೆ ನಾನು ಶಿಸ್ತು ಹಾಗು ವಿಧೇಯತೆ.
ನನ್ನ ಸಹಪಾಠಿಗಳನ್ನು ಅಣ್ಣತಂಗಿಯರಂತೆ ಕಂಡಾಗ
ಕಲಿತೆ ನಾನು ಕಾಳಜಿ ಹಾಗು ಹಂಚುವಿಕೆ.

## 6.3.5 ಪ್ರೀತಿ ಮತ್ತು ಕರುಣೆ

ಉದ್ದೇಶ :

- ಸಕಲ ಜೀವರಾಶಿಗಳನ್ನು ಕುರಿತು ಪ್ರೀತಿಯನ್ನು ಬೆಳೆಸುವುದು.
- ಕರುಣೆಯ ಭಾವವನ್ನು ಬೆಳೆಸುವುದು.
- ಕಾಳಜಿ ಮತ್ತು ಉದಾರತೆಯನ್ನು ಕಲಿಯುವುದು.

ವಿಧಾನ : ಕತೆಹೇಳುವುದು, ಬುದ್ಧಿಮತ್ತೆ, ಗುಂಪುಚರ್ಚೆಗಳು, ಸಹಾಯಹಸ್ತದಾಟ, ಕವನವಾಚನ

ಸಮಯ : 30 ನಿಮಿಷಗಳು

ಕತೆ : ಸೂಜಿಮರ

ಒಂದಾನೊಂದುಕಾಲದಲ್ಲಿ ಅಣ್ಣತಮ್ಮಂದಿರಿಬ್ಬರು ಕಾಡಿನ ಅಂಚಿನಲ್ಲಿ ವಾಸಿಸುತ್ತಿದ್ದರು. ಅವರಲ್ಲಿ ಅಣ್ಣನು ತಮ್ಮನನ್ನು ಬಹಳ ಕೀಳಾಗಿಕಾಣುತ್ತಾ, ಅವನ ಒಳ್ಳೆಯಬಟ್ಟೆಗಳನ್ನೆಲ್ಲಾ ತಾನು ತೆಗೆದುಕೊಂಡುಬಿಡುತ್ತಿದ್ದನು. ಹಾಗು ಆಹಾರವನ್ನೆಲ್ಲಾ ತಮ್ಮನಿಗೆ ಕೊಡದೆ ತಾನೆ ತಿನ್ನುತ್ತಿದ್ದನು. ಒಂದುದಿನ ಅಣ್ಣನು ಮಾರುಕಟ್ಟೆಯಲ್ಲಿ ಮಾರುವುದಕ್ಕಾಗಿ ಸೌದೆಕಡಿದು ತರಲು ಕಾಡಿಗೆ ಹೋದನು. ಮರಗಳ ಕೊಂಬೆರೆಂಬೆಗಳನ್ನು ಕಡಿಯುತ್ತಾ ಮುಂದುವರಿಯುತ್ತಿದ್ದ ಅವನಿಗೆ ಒಂದು ಅದ್ಭುತವಾದ ಮರ ಇದಿರಾಯಿತು. ಆ ಮರವು ಅವನನ್ನು ಕುರಿತು "ಓ ದಯಾಳುವೇ, ದಯವಿಟ್ಟು ನನ್ನ ರೆಂಬೆಗಳನ್ನು ಕಡಿಯಬೇಡ. ನೀನು ನನ್ನನು ಹೀಗೆಯೆ ಬಿಟ್ಟರೆ ಅದಕ್ಕೆ ಬದಲಾಗಿ ನಾನು ಚಿನ್ನದ ಸೇಬಿನಹಣ್ಣುಗಳನ್ನು ಕೊಡುವೆ" ಎಂದು ಹೇಳಿತು. ಅಣ್ಣನು ಅದಕ್ಕೊಪ್ಪಿದನು. ಆದರೆ ಮರವು ಕೊಟ್ಟ ಸೇಬಿನಹಣ್ಣಿನ ಸಂಖ್ಯೆಯನ್ನು ನೋಡಿ ನಿರಾಶನಾದನು. ದುರಾಸೆ ಅವನನ್ನು ಆವರಿಸಿತು. ಸಾಕಷ್ಟು ಚಿನ್ನದಹಣ್ಣುಗಳನ್ನು ಕೊಡದಿದ್ದರೆ, ಇಡೀ ಮರದಕಾಂಡವನ್ನೇ ಕತ್ತರಿಸುವುದಾಗಿ ಬೆದರಿಸಿದನು. ಅವನ ಬೆದರಿಕೆಗೆ ಬದಲಾಗಿ ಆ ಅದ್ಭುತವಾದ ಮರವು ಅಣ್ಣನಮೇಲೆ ನೂರಾರು ಸೂಜಿಗಳ ಮಳೆಯನ್ನೇ ಸುರಿಸಿತು. ಚುಚ್ಚಿದ ಸೂಜಿಗಳ ನೋವಿನಿಂದ ಕೆಳಗೆ ಬಿದ್ದ ಅಣ್ಣನು ಅಳಲಾರಂಭಿಸಿದನು. ಅತ್ತ ಸೂರ್ಯದೇವನು ದಿಗಂತದತ್ತ ಸಾರಿದನು.

ಇತ್ತ ಕಳವಳಗೊಂಡ ತಮ್ಮನು ಅಣ್ಣನನ್ನು ಅರಸುತ್ತಾ ಕಾಡಿಗೆ ಬಂದನು. ನೂರಾರು ಸೂಜಿಗಳ ಗಾಯದಿಂದ ನರಳುತ್ತಾ ಬಿದ್ದಿದ್ದ ಅಣ್ಣನನ್ನು ಕಂಡನು. ಶೀಘ್ರವಾಗಿ

ಅಣ್ಣನೆಡೆಗೆ ಬಂದ ಅವನು ಬಹಳ ಜಾಗರೂಕತೆಯಿಂದ ಮತ್ತು ಬಹು ಪ್ರೀತಿಯಿಂದ ಒಂದೊಂದೇ ಸೂಜಿಯುನ್ನು ಅಣ್ಣನ ದೇಹದಿಂದ ತೆಗೆದನು. ತಮ್ಮನ ಒಳ್ಳೆಯುನಡತೆಯುನ್ನು ಕಂಡು ನಾಚಿದ ಅಣ್ಣನು ಇಷ್ಟುದಿನ ಅವನನ್ನು ಕೀಳಾಗಿ ನೋಡಿಕೊಂಡದ್ದಕ್ಕಾಗಿ ಕ್ಷಮೆ ಯಾಚಿಸಿದನು. ಇನ್ನು ಮುಂದೆ ತಾನು ಕೂಡ ಒಳ್ಳೆಯ ವ್ಯಕ್ತಿಯಾಗುವೆನೆಂದು ವಚನವಿತ್ತನು. ಪರಿವರ್ತನೆಗೊಂಡ ಅಣ್ಣನ ಹೃದಯುವನ್ನು ಕಂಡ ಮರವು ಅವರೀರ್ವರಿಗೆ ಅಗತ್ಯವಿರುವಷ್ಟೂ ಚಿನ್ನದಹಣ್ಣುಗಳನ್ನು ಕೊಟ್ಟಿತು.

ಕತೆಯ ನೀತಿ : ಕರುಣೆಯೂ ಮತ್ತು ಉದಾರಿಯಾಗಿರುವುದು ಬಹಳ ಮುಖ್ಯ, ಏಕೆಂದರೆ, ಅದಕ್ಕೆ ತಕ್ಕ ಪ್ರತಿಫಲವು ಕೂಡ ಸಿಹಿಯಾಗಿರುತ್ತದೆ.

ಆಟ : ಸಹಾಯುಹಸ್ತ

- ಮಕ್ಕಳನ್ನು ಅಕ್ಕಪಕ್ಕ ವೃತ್ತಾಕಾರದಲ್ಲಿ ನಿಲ್ಲಿಸಿರಿ.
- ಒಂದು ಮಗುವು ಆ ವೃತ್ತದ ಕೇಂದ್ರದಲ್ಲಿ ನಿಂತು ತನ್ನ ಎರಡೂ ಕೈಗಳನ್ನು ಎದೆಯುಮೇಲಿರಿಸಿಕೊಳ್ಳಲಿ.
- ಸುತ್ತನಿಂತಿರುವ ಮಕ್ಕಳು ತಮ್ಮೆರಡೂ ಕೈಗಳನ್ನು ಮಧ್ಯನಿಂತಿರುವ ಮಗುವಿನತ್ತ ಚಾಚಲಿ.
- ನೀವು ಸೂಚನೆ ನೀಡಿದೊಡನೆ ಮಧ್ಯ ನಿಂತಿರುವ ಮಗುವು ತನ್ನ ಸ್ನೇಹಿತರೆಡೆಗೆ ಮುಂದಕ್ಕೆ ವಾಲುತ್ತ ಇನ್ನೇನು ಬೀಳಲೆಂಬಂತೆ ತನ್ನೆರೆಡೂ ಕೈಗಳನ್ನು ಮುಂದಕ್ಕೆ ಚಾಚಲಿ. ಸುತ್ತನಿಂತಿರುವ ಮಕ್ಕಳು ಮಧ್ಯದ ಮಗುವನ್ನು ಚಾಚಿದ ತಮ್ಮಕೈಗಳಿಂದ ಬೀಳದಂತೆ ತಡೆದು ಹಿಡಿದುಕೊಳ್ಳುತ್ತಾರೆ.
- ಮುಂದಕ್ಕೆ ವಾಲುತ್ತಾ ಬೀಳಲೆತ್ನಿಸುತ್ತಿರುವ ಮಗುವನ್ನು ಸುತ್ತನಿಂತಿರುವ ಮಕ್ಕಳು ಮತ್ತೆ ಮತ್ತೆ ನೆಟ್ಟಗೆ ನಿಲ್ಲಿಸುತ್ತಾ ವೃತ್ತದ ಎಲ್ಲಾದಿಕ್ಕುಗಳಲ್ಲಿಯೂ ಮುಂದಕ್ಕೆ ಕಳಿಸುತ್ತಾರೆ.
- ಅಕಸ್ಮಾತ್ ಆ ಮಗುವು ಕೆಳಗೆ ಕುಸಿದರೆ, ಆ ಸುತ್ತು ಮುಗಿದಂತೆ.
- ಇದೇರೀತಿ ಎಲ್ಲ ಮಕ್ಕಳಿಗೂ ವೃತ್ತದನಡುವೆ ನಿಲ್ಲುವ ಸರದಿ ಕಲ್ಪಿಸಿ.

## ಕವನ : ಪ್ರೀತಿ ಮತ್ತು ಕರುಣೆ

(ರಚನೆ : ಪಾರುಲ್ ದಾವರ್)

ತೋರು ನಿನ್ನ ಪ್ರೀತಿಯ ಬಡವನಿಗೆ, ತೋರು ನಿನ್ನ ಪ್ರೀತಿಯ ದುರ್ಬಲನಿಗೆ,
ತೋರು ನಿನ್ನ ಕಾಳಜಿಯ ಅವರ ಅವಶ್ಯಕತೆಗಳಿಗೆ,
ತೋರು ನಿನ್ನ ಪ್ರೀತಿಯ ಪ್ರಾಣಿ, ಪಕ್ಷಿಸಂಕುಲಗಳಿಗೆ,
ಒಳಿತಲ್ಲವೋ ಘಾಸಿಗೊಳಿಸಿ ಪೆಟ್ಟುಮಾಡುವುದು ಅವುಗಳಿಗೆ.

ಪಸರಿಸು ಸಂತೋಷ, ನಲಿವುಗಳ ಎಲ್ಲೆಡೆಗೆ,
ಮಾನವೀಯತೆಯ ದಾರಿದೀಪ ತೋರಲಿ ಎಲ್ಲೆಡೆಗೆ,
ಕರುಣೆಯಾಗು ನೀ, ವಿನಯಿಯಾಗು ನೀ,
ಮಾನವೀಯತೆಯ ದಾರಿದೀಪ ಹೊಳೆಯಲಿ ಎಲ್ಲೆಡೆ.

ಮಾನವಸಂಕುಲವು ಮಾತ್ರ ದೇವರಿತ್ತ ವರ,
ಪ್ರೀತಿಯ ಭಾವನೆ, ವಿಶಾಲಹೃದಯ ಅವನಿತ್ತ ವರ,
ಚಾಚು ನಿನ್ನ ಸಹಾಯಹಸ್ತ ಕಷ್ಟದಲ್ಲಿರುವವರೆಡೆಗೆ,
ಕೆಟ್ಟವಚನ ಬಳಸದೆ, ಮೃದುವಾಗು, ಕಾಳಜಿಯಿಡು ಎಲ್ಲರೆಡೆ.
ಪಸರಿಸು ಆನಂದ, ನಲಿವುಗಳ ಎಲ್ಲೆಡೆಗೆ,
ಮಾನವೀಯತೆಯ ದಾರಿದೀಪ ತೋರಲಿ ಎಲ್ಲೆಡೆ,
ಕರುಣೆಯಾಗು ನೀ, ವಿನಯಿಯಾಗು ನೀ,
ಮಾನವೀಯತೆಯ ದಾರಿದೀಪ ಹೊಳೆಯಲಿ ಎಲ್ಲೆಡೆ.

## 6.3.6 ಸಮಯಪ್ರಜ್ಞೆ

ಸಮಯಪರಿಪಾಲನೆ ಸುಲಭವಾದದ್ದಲ್ಲ. ಅದರ ಸಿದ್ಧಿಗೆ ನಿರಂತರ ಪ್ರಯತ್ನ ಅವಶ್ಯಕ. ಒಬ್ಬ ವ್ಯಕ್ತಿಗೆ ಯಾವುದೇ ಕಾರ್ಯವಿಳಂಬವಿಲ್ಲದೆ ಸರಿಯಾದಸಮಯಕ್ಕೆ, ಸರಿಯಾದಕೆಲಸ ಮಾಡಲು ಇದು ಸಾಧ್ಯವಾಗಿಸುತ್ತದೆ. ಸಮಯಪ್ರಜ್ಞೆಯು ಎಲ್ಲರಲ್ಲಿಯೂ ಇರಲೇಬೇಕಾದಂತಹ ಒಂದು ವಿಶೇಶಗುಣ. ಬದುಕಿನ ಪ್ರತಿಯೊಂದು ಹಾದಿಯಲ್ಲಿಯೂ ಇದು ಹಲವಾರು ರೀತಿಯ ಪಾತ್ರವಹಿಸುತ್ತಾ ನಮಗೆ ಪ್ರಯೋಜನಕಾರಿಯಾಗಿದೆ. ಸಮಯಪ್ರಜ್ಞೆಯು ಒಂದು ಪ್ರಬಲವಾದ ವೈಶಿಷ್ಟ್ಯವಾಗಿದ್ದು, ಅದು ಒಬ್ಬ ವ್ಯಕ್ತಿಯ ಯಶಸ್ಸು ಮತ್ತು ಜನಪ್ರಿಯತೆಗೆ ಕಾರಣವಾಗಿದೆ.

ಉದ್ದೇಶ :

- ಸಮಯಪ್ರಜ್ಞೆ / ಉಪಸ್ಥಿತಿ ಯ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದು.
- ತರಗತಿಗಳಿಗೆ ಸಮಯಕ್ಕೆ ಸರಿಯಾಗಿ ಹಾಜರಾಗುವುದು / ನಿರ್ಗಮಿಸುವುದು.
- ಗೈರುಹಾಜರಾಗುವ ದಿನವನ್ನು ಮುಂಚಿತವಾಗಿಯೇ ಶಿಕ್ಷಕರಿಗೆ ಸೂಚಿಸುವುದು.
- ಮನೆಯಲ್ಲಿ ಪೂರ್ಣಗೊಳಿಸಬೇಕಾದ ಶಾಲಾಚಟುವಟಿಕೆಗಳನ್ನು ಸಮಯಕ್ಕೆ ಸರಿಯಾಗಿ ಸಂಪೂರ್ಣಗೊಳಿಸುವುದು.

ವಿಧಾನ : ಕಥಾನಿರೂಪಣೆ, ಬುದ್ಧಿಮತ್ತೆ ಹಾಗು ಚರ್ಚಾಕೂಟ

ಸಮಯ : 40 ನಿಮಿಷಗಳು

ಚಟುವಟಿಕೆ 1 : ಪಾತ್ರನಿರ್ವಹಣೆ

- ನಾಲ್ಕರಿಂದ ಐದು ವಿದ್ಯಾರ್ಥಿಗಳಿರುವಂತೆ ಮಕ್ಕಳನ್ನು ಹಲವು ಗುಂಪುಗಳನ್ನಾಗಿ ಮಾಡಿ.
- ಪ್ರತಿಗುಂಪಿಗೂ ಈ ಕೆಳಕಂಡ ಪಟ್ಟಿಯಲ್ಲಿರುವ ಯಾವುದಾದರೂ ವಿಷಯವನ್ನು ನಿಯೋಜಿಸಿ :
  - ಶಾಲೆಗೆತಡವಾಗಿ ಬರುವ ಶಿಕ್ಷಕ / ಶಿಕ್ಷಕಿ.
  - ಪರೀಕ್ಷೆಯದಿನ ತಡವಾಗಿ ಬರುವ ಶಾಲಾವಾಹನ
  - ತಡವಾಗಿ ಎದ್ದೇಳುವ ವಿದ್ಯಾರ್ಥಿ
  - ಮಗುವನ್ನು ಮನೆಗೆಕರೆದುಕೊಂಡು ಹೋಗಲು ಶಾಲೆಗೆ ತಡವಾಗಿ ಬರುವ ತಾಯಿ

ಎರಡು ಪ್ರಹಸನಗಳನ್ನು ರಚಿಸುವಂತೆ ಪ್ರತೀಗುಂಪಿಗೂ ಸೂಚಿಸಿ

- ಯಾರಾದರೂ ತಡವಾಗಿ ಆಗಮಿಸಿದಾಗ ಏನಾಗಬಹುದು ಎಂಬುದನ್ನು ತೋರಿಸುವ ಒಂದು ಪ್ರಹಸನ
- ಸಮಯಕ್ಕೆ ಸರಿಯಾಗಿ ಆಗಮಿಸಿದಾಗ ಆಗುವಂತಹ ಪರಿಣಾಮವನ್ನು ಕುರಿತಂತಹ ಇನ್ನೊಂದು ಪ್ರಹಸನ
- ಪ್ರಹಸನ ರಚಿಸಿ, ಅದನ್ನು ಅಭ್ಯಾಸಮಾಡಲು ತಂಡಗಳಿಗೆ ಸಮಯಾವಕಾಶ ನೀಡಿ
- ಎರಡೂ ಪ್ರಹಸನಗಳನ್ನು ತಂಡಗಳು ತರಗತಿಯಲ್ಲಿ ಪ್ರದರ್ಶಿಸಲಿ.

## 6.4 ಅನುಬಂಧ

ಮೌಲ್ಯಗಳ ಪಟ್ಟಿ :

ಮೌಲ್ಯಗಳನ್ನು ಗುರುತಿಸಲು ಮಾರ್ಗಸೂಚಿಗಳು :

- ಮೌಲ್ಯಗಳನ್ನು ಅಭಿವ್ಯಕ್ತಿಸುವ ಪದಬಳಕೆಯಲ್ಲಿ ಯಾವುದೇ ಅಸ್ಪಷ್ಟತೆ ಇರಬಾರದು.
- ಪ್ರತಿಯೊಬ್ಬರೂ ಮೌಲ್ಯಗಳನ್ನು ಸಮಾನರೀತಿಯಲ್ಲಿ ವ್ಯಾಖ್ಯಾನಿಸುವಂತಿರಬೇಕು.
- ಅದು ಮಾತೃತ್ವದ ಹೇಳಿಕೆಯಾಗಿರಬಾರದು.
- ಮುಖ್ಯವಾಗಿ ಮೌಲ್ಯಗಳನ್ನು ಕಾರ್ಯರೂಪಕ್ಕೆ ತರಬಹುದಾದ ಹಿನ್ನಲೆಯಿಂದ ಗುರುತಿಸಿ.
- 'ರಾಷ್ಟ್ರೀಯಮೌಲ್ಯಗಳ ಮಾರ್ಗಸೂಚಿ'ಯನ್ನು ಅಳವಡಿಸಿಕೊಳ್ಳತಕ್ಕದ್ದು.

ಮೌಲ್ಯಗಳು ಸಾರ್ವತ್ರಿಕವಾಗಿಯೂ / ಶಾಶ್ವತವಾಗಿಯೂ ಇರತಕ್ಕದ್ದು :

- ಸಮಗ್ರತೆ
- ಅಂತರ್ಗತತೆ
- ಸುಸ್ಥಿರತೆ
- ಜವಾಬ್ದಾರಿ
- ರಾಷ್ಟ್ರಪ್ರೇಮ
- ಧೈರ್ಯ
- ಪಾರದರ್ಶಕತೆ

ರಾಷ್ಟ್ರೀಯ ಹಾಗು ಸಾಂಸ್ಕೃತಿಕ ಮೌಲ್ಯಗಳ ಜೊತೆಯಲ್ಲಿ, ಸಾರ್ವತ್ರಿಕಮೌಲ್ಯಗಳಾದ ಪ್ರೀತಿ, ಶಾಂತಿ, ಗೌರವ, ಸಹಿಷ್ಣುತೆ, ಕ್ಷಮೆ, ಸಹಬಾಳ್ವೆ ಮತ್ತು ಅಹಿಂಸೆ – ಇವುಗಳನ್ನು ನಮ್ಮ ಇಂದಿನ ಯುವ ನೇತಾರರಿಗೆ ಮನವರಿಕೆ ಮಾಡಿಕೊಡಬೇಕಾಗಿದೆ.

- ನೀವು ಯಾವುದನ್ನು ಇಷ್ಟಪಡುವುದಿಲ್ಲವೋ ಅದನ್ನು ಇತರರಿಗೂ ಕೂಡ ಮಾಡಬೇಡಿ.
- ನಮ್ಮ ರಾಷ್ಟ್ರೀಯಮೌಲ್ಯಗಳು ಹಾಗು ಸಚ್ಚಾರಿತ್ರ್ಯಗಳ ಸಾರವಾದ ಸತ್ಯಸಂಧತೆ, ನೈರ್ಮಲ್ಯ ಹಾಗು ಸಂವೇದನಾನಿಯಂತ್ರಣಗಳು ದೇಶದ ಹಿತ ಮತ್ತು ಅಭಿವೃದ್ಧಿಗಳನ್ನು ಉಳಿಸಿ ಬೆಳೆಸುವುದಕ್ಕೆ ಅವಶ್ಯವಿರುವ ಪ್ರಮುಖ ಸಾಧನಗಳು.
- ಮಾನವನ ಸಾಕಾರರೂಪವಿರುವುದೇ ಈ ಮೌಲ್ಯಗಳ ನಿಧಿಯನ್ನು ಪಡೆದುಕೊಳ್ಳುವುದಕ್ಕೆ. ಆದ್ದರಿಂದ ಈ ಮೂರ್ತರೂಪವನ್ನು ಪೌಷ್ಟಿಕಆಹಾರ, ವ್ಯಾಯಾಮ ಮತ್ತು ವಿರಾಮಗಳಿಂದ ಪೋಷಿಸಿ, ನಿಮ್ಮ ಅವಶ್ಯಕತೆಗಳಿಗಿಂತ ಇತರರ ಸೇವೆಯಲ್ಲಿ ಹೆಚ್ಚು ತೊಡಗಿಸಿ.
- ಶ್ರೀಮಂತರ ಸಂಪತ್ತು ಇರುವುದೇ ಇತರರ ಸಹಾಯ ಮತ್ತು ಸೇವೆಗಾಗಿ.
- ಕೇವಲ ರಕ್ತಸಂಬಂಧಿಕರು ಮಾತ್ರ ನಿಮ್ಮ ಕುಟುಂಬಕ್ಕೆ ಸೇರಿದವರಲ್ಲ. ಇಡೀ ಸಮಾಜವನ್ನು ತಮ್ಮ ಕುಟುಂಬವೆಂದು ತಿಳಿದು ತೆರೆದಹೃದಯದಿಂದ ಅಪ್ಪಿಕೊಳ್ಳುವಂತಹ ಸಮಾಜ ನಿರ್ಮಾಣವಾಗಬೇಕು. "ವಸುದೈವಕುಟುಂಬಕಂ " ಎಂಬ ವ್ಯಾಖ್ಯೆ ಸಾರ್ವಕಾಲಿಕ ಸತ್ಯ.
- ಜ್ಞಾನವೇ ಪರಮೋಚ್ಚ ಶಕ್ತಿ ಹಾಗು ಸಂಪತ್ತು.
- ಸತ್ಯಸಂಧತೆಗಿಂತ ಹೆಚ್ಚಿನ ಅನುಷ್ಠಾನ ಮತ್ತೊಂದಿಲ್ಲ.
- ನೈಸರ್ಗೀಯಸಂಪತ್ತುಗಳನ್ನು ನ್ಯಾಯಯುತವಾಗಿ ಬಳಸಿರಿ. ಅದರ ಅನಗತ್ಯ ಸವಕಳಿಯ ಬಗ್ಗೆ ಎಚ್ಚರವಹಿಸಿ. ಭೂ, ಜಲ ಹಾಗು ವಾಯುಮಾಲಿನ್ಯಕ್ಕೆ ಕಾರಣರಾಗಬೇಡಿ. ನಿಸರ್ಗಸಂಪತ್ತನ್ನು ಸಂರಕ್ಷಿಸಿ ಅದನ್ನು ಮುಂದಿನ ಪೀಳಿಗೆಗೆ ಉಳಿಸಬೇಕಾದ ಗುರುತರ ಜವಾಬ್ದಾರಿ ನಮ್ಮ ಮೇಲಿದೆ.
- ಹಚ್ಚಹಸಿರಿನಿಂದ ಸಂಪದ್ಭರಿತವಾದ ಭೂಮಿಯು ಎಲ್ಲಾ ಜೀವಜಂತುಗಳಿಗೆ ಅತ್ಯಗತ್ಯ. ಅರಣ್ಯಗಳು, ಉದ್ಯಾನವನಗಳು ಹಾಗು ಕೃಷಿಭೂಮಿಗಳನ್ನು ಜತನದಿಂದ ಕಾಪಾಡಿ. "ಒಂದುಮರವು ಹತ್ತುಮಕ್ಕಳಿಗೆ ಸಮ ", ನೆನಪಿರಲಿ.

# 6.4 ಶಿಕ್ಷಕರಿಗೆ ಮಾರ್ಗಸೂಚಿ

ಈ ಎಲ್ಲಾ ಚಟುವಟಿಕೆಗಳ ಮೂಲ ಉದ್ದೇಶದಗುರಿ ಏನೆಂದರೆ, ಮಕ್ಕಳ ಸಾಮಾಜಿಕ ಹಾಗು ಭಾವನಾತ್ಮಕ ಕೌಶಲ್ಯಗಳ ವಿಕಾಸ, ಬಾಂಧವ್ಯಗಳ ಬೆಳವಣಿಗೆ, ಹೊಸಅನುಭವಗಳ ಆನಂದ ಮತ್ತು ಅಂತಿಮವಾಗಿ ಬದುಕಿನಲ್ಲಿ ಎದುರಾಗುವ ಸಂದರ್ಭಗಳನ್ನು ವಿಭಿನ್ನ ವಿಧಾನಗಳ ಮೂಲಕ ಎದುರಿಸುವ ಆತ್ಮಸ್ಥೈರ್ಯದ ನಿರ್ಮಾಣ.

ಈ ಶಿಕ್ಷಕರ ಕೈಪಿಡಿಯು ಹಲವಾರು ಕಾರ್ಯಚಟುವಟಿಕೆಗಳ ಸಂಗ್ರಹವಾಗಿದ್ದು, ಇದನ್ನು 1 ರಿಂದ 3ನೇ ತರಗತಿಯ ಮಕ್ಕಳಿಗೆ ಆಧಾರವಾಗಿ ಬಳಸಿಕೊಳ್ಳಬಹುದಾಗಿದೆ. ವಿಶೇಷವಾದ ಶೈಕ್ಷಣಿಕ ವಿಧಾನಗಳನ್ನು ಕಾರ್ಯರೂಪಕ್ಕೆ ತರುವಂತೆ ಇದನ್ನು ರಚಿಸಲಾಗಿದೆ. ಈ ಕೆಳಗಿನ ಅಂಶಗಳಿಗೆ ಇದನ್ನು ಅನ್ವಯಿಸಬಹುದಾಗಿದೆ :

- ಮಕ್ಕಳ ಸಾಮಾಜಿಕ, ಭಾವನಾತ್ಮಕ, ಸಂಬಂಧಿತ ಹಾಗು ಅಂತರ್ಗತ ಸಾಮರ್ಥ್ಯಗಳನ್ನು ಅಭಿವೃದ್ಧಿಗೊಳಿಸಿ ಉತ್ತಮಪಡಿಸಿ.
- ಮಕ್ಕಳ ಅಂತರಸಾಂಸ್ಕೃತಿಕ ತಿಳುವಳಿಕೆಯನ್ನು ಉತ್ತೇಜಿಸಿ.
- ಮಕ್ಕಳಲ್ಲಿರಬಹುದಾದ ವಿಭಿನ್ನ ಮೌಲ್ಯಗಳ ಬಗ್ಗೆ ಜಾಗೃತಿ ಮೂಡಿಸಿ.

ಈ ಕೈಪಿಡಿಯಲ್ಲಿರುವ ಚಟುವಟಿಕೆಗಳು ಹಲವು ವಿಭಿನ್ನಮೂಲಗಳು ಹಾಗೂ ಹಲವು ವಿಭಿನ್ನ ಸಾಮಾಜಿಕ – ಸಾಂಸ್ಕೃತಿಕ ಪರಿಸರಗಳಿಂದ ಬಂದವುಗಳಾಗಿವೆ.

ಆದಾಗ್ಯೂ, ಸಾಮಾಜಿಕ, ಭಾವನಾತ್ಮಕ ಹಾಗು ಸಂಬಂಧಿತ ಸಾಮರ್ಥ್ಯಗಳು ಕೇವಲ ಒಂದು ದಿನದಲ್ಲಿ ಘಟಿಸುವಂತದ್ದಲ್ಲ. ಅವು ಹಲವಾರು ಅಂಶಗಳ ಮೇಲೆ ಅವಲಂಬಿತವಾಗಿದೆ. ಸಾಮಾಜೀಕೀಕರಣ ಹಂಚಿಕೆಯು ಬೋಧನಾತ್ಮಕ ಮತ್ತು ಕಲಿಕೆಯ ಪರಿಸರಕ್ಕೆ ಒಂದು ಸವಾಲಾಗಿದೆ.

ಪ್ರಿಸ್ಕೂಲ್ ಅಥವಾ ಪ್ರಾಥಮಿಕಶಾಲೆಯಲ್ಲಿ ಕೇವಲ ಒಂದೇ ಒಂದು ಚಟುವಟಿಕೆ ಅಥವಾ ಒಂದು ವೈಶಿಷ್ಟ್ಯವಾರದ ಮೂಲಕ ಸಾಮಾಜಿಕ, ಅನುಭೂತಿ ಮತ್ತು ಸಂಬಂಧಿತ ಸಾಮರ್ಥ್ಯಗಳನ್ನು ನಿರ್ಮಿಸಲಾಗುವುದಿಲ್ಲ. ಇದಕ್ಕೆ ತದ್ವಿರುದ್ಧವಾಗಿ, ಈ ಸಾಮರ್ಥ್ಯಗಳು ಕ್ರಮಬದ್ಧವಾದ ಕಲಿಕೆಯ ಪ್ರಕ್ರಿಯೆಯಿಂದ ಹಂತಹಂತವಾಗಿ

ಬೆಳೆಯುತ್ತವೆ. ಅಲ್ಲಿ ಮಕ್ಕಳು ಪರಿಣಾಮಕಾರಿಯಾದ ಮತ್ತು ಅರಿವಿನ ಹಂತದ ಅನುಭವವನ್ನು ಪಡೆಯುತ್ತಾರೆ.

ಎಲ್ಲಾಮಕ್ಕಳನ್ನೂ ಅವರಲ್ಲಿರುವ ವಿಭಿನ್ನತೆಗಳ ಹೊರತಾಗಿಯೂ ಒಪ್ಪಿಕೊಂಡು ಸ್ವಾಗತಿಸುವ ಒಂದು ಸಮುದಾಯದಲ್ಲಿ ಗೌರವ ಮತ್ತು ಸಮಾನತೆ ಗಳಿಸುವುದು ಎಂದರೆ ಏನೇಂಬುದನ್ನು ಮಕ್ಕಳು ಕಲಿಕೆಯ ಪ್ರಕ್ರಿಯೆಯ ಜೊತೆಜೊತೆಯಾಗಿ ಅರಿಯುತ್ತಾರೆ.

* * * * * * * *